ಶಾಸ್ತ್ರದ ಮುಖ್ಯ ಮೂರು ಹಂತಗಳಿಗಾಗಿ - ಮಾಹಿತಿ, ಸಂಗ್ರಹ ಅಥವಾ ಮೌಲ್ಯೀಕರಣ ಮಾಹಿತಿಯ ಪುನಃ ರಾವಲೋಕನ ಅಥವಾ ವಿಶ್ಲೇಷಣೆ ಮತ್ತು ಸಮರ್ಥನೆಯ ಯೋಜನೆಗಳಿಗೆ ಪ್ರಹಸನ (ನಾಟಕ) ಗಳನ್ನು ಪ್ರಸ್ತುತ ಪಡಿಸಲು ಅಥವಾ ಕಲೆ ಪ್ರದರ್ಶನ ಇಲ್ಲವೆ ಕಥೆ ಹೇಳುವ ಸಲುವಾಗಿ ಉಪಯೋಗಿಸಿಕೊಳ್ಳಲಾಯಿತು. ಈ ಕಾಲಾವಧಿಯು ನಾಲ್ಕು - ಕಾಲಾವಧಿಗಳಲ್ಲಿಯೇ ಅತ್ಯಂತ ಫಲದಾಯಕವಾಗಿತ್ತು.

ಐದನೆ ಕಾಲವಧಿಯು ಅತಿಥಿಗಳ ಆಮಂತ್ರಣದೊಂದಿಗೆ ಸಮಾರೋಪ ಸಮಾರಂಭವಾಗಿತ್ತು. ಸಾಮಾನ್ಯವಾಗಿ ಇದು ಕೊನೆಗೆ ಬರಬೇಕಾದುದು, ಯಾಕೆಂದರ ಭಾಗವಹಿಸಿದರು ಇಲ್ಲಿ ತಮ್ಮ ಕ್ರಿಯಾ ಯೋಜನೆಯನ್ನು ಕಾರ್ಯಾಗಾರದಲ್ಲಿ ನಡೆದು ಬಂದ ಎಲ್ಲ ಚಟುವಟಿಕೆಗಳ ವಿವರಗಳನ್ನು ಅತಿಥಿಗಳನ್ನು ಮಾತನಾಡಲು ಕರೆಯುವ ಮುನ್ನ, ಪ್ರಸ್ತುತ ಪಡಿಸಬೇಕಾಗುತ್ತದೆ.

<u>ಕಾರ್ಯಾಗಾರದ ಸಂಪನ್ಮೂಲಗಳು :</u>

ಕಾರ್ಯಾಗಾರವನ್ನು ಸ್ಥಳೀಯ ಪ್ರಾದೇಶಿಕ ಭಾಷೆಗಳಲ್ಲಿ ಜರುಗಿಸಲ್ಪಟ್ಟಿತ್ತು. ಆದ್ದರಿಂದ ಭಾಗವಹಿಸಿದ ಎಲ್ಲ ಸಹಾಯಕರು ಪ್ರಾದೇಶಿಕ ಭಾಷೆಯಲ್ಲಿ ಬರೆಯಲು ಮತ್ತು ಮಾತನಾಡಲು ಬಲ್ಲವರಾಗಿದ್ದರು. ಹೊರಗಿನ ಸಹಾಯಕರಿಗೆ ನುರಿತ ಬದ್ಧತೆಯುಳ್ಳ ಅನುವಾದಕರು ಬೇಕಿದ್ದರು.

ಅಂತಹ ಸೂಕ್ಷ್ಮ ಸಲಕರಣಗಳೇನೂ ಬೇಕಿರಲಿಲ್ಲ. ಸಾಮಾನ್ಯವಾದ ಕಾರ್ಯಾಲಯ ಬಳಕೆಯ ಸ್ಟೇಶನರಿ ವಸ್ತುಗಳು ಸಾಕಿತ್ತು.

ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮ ನೀಡುವವರು ಇಂತಹ ಸಂದರ್ಭಗಳಲ್ಲಿ ಒಂದು ದೊಡ್ಡ ಆಸ್ತಿ ಇದ್ದಂತೆ ಇದರಿಂದ ಭಾಗವಹಿಸಿದವರ ಒತ್ತಡವನ್ನು ಮತ್ತು ತೊಂದರೆಗಳನ್ನು ಕಡಿಮೆ ಮಾಡಿ ಅವರು ತಮ್ಮ ಅನಿಸಿಕೆಗಳನ್ನು ಭಾವನೆಗಳನ್ನು ವ್ಯಕ್ತಪಡಿಸಲು ಸಹಾಯವಾಗುವದು. ಕೆಲವು ಭಾಗವಹಿಸಿದ ಸಹಾಯಕರು ಹಾಡುವದನ್ನು ನರ್ತಿಸುವದನ್ನು ಗುಂಪು ಆಟಗಳಲ್ಲಿ ಭಾಗವಹಿಸುವದನ್ನು ಮಾಡುವದು ಅಗತ್ಯವಾಗಿತ್ತು ಇದರಿಂದ ಸಹಭಾಗಿತ್ವ ಮತ್ತು ಆನಂದ ವೃದ್ಧಿಯಾಗುತ್ತಿತ್ತು.

ಹೆಚ್ಚುವರಿ ಸಹಾಯಕರು (ಕಲೆ, ಸಂಗೀತ ಮತ್ತು ನಾಟಕಗಳಿಗಾಗಿ) ಜೊತೆಗೆ ಎಂದಿನಂತೆ ಗುಂಪಿನ ಸಹಾಯಕರಲ್ಲದೆ. ಬೇಕಾಗಿದ್ದರು ಇವರು ಭಾಗವಹಿಸಿದವರಲ್ಲಿ ತಲಾ 6 ಜನರಂತೆ ಗುಂಪುಗಳನ್ನಾಗಿ ವಿಂಗಡಿಸಿ. ಕಾರ್ಯಾಗಾರದ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ಮುಖ್ಯ ಸಹಾಯಕರೊಬ್ಬರು ಸಹ ಬೇಕಾಗಿದ್ದರು, ಹೊರಗಿನ ಹೆಚ್ಚಿನ ಸಹಾಯಕರಿದ್ದರೂ ಆಯಿತು ಇಲ್ಲದಿದ್ದರೂ ಆಯಿತು.

<u>'ಮೌಲ್ಯೀಕರಣ, ವಿಶ್ಲೇಷಣೆ, ಕ್ರಿಯಾಚಾರ' - ಕ್ರಮವಿಧಾನಶಾಸ್ತ್ರದ ಸಬಲೀಕರಣ :</u>

ಸರಕಾರದಿಂದ ಘೋಷಿತ ವಂಚಿತರಾಗಿ ಲಭ್ಯವಿದ್ದ ಸೇವೆಗಳು ಮತ್ತು ಸವಲತ್ತುಗಳು ಮತ್ತು ಅಗತ್ಯವಿದೆ ಜನರಿಗೆ ಈ ಸೇವೆಗಳು ಮತ್ತು ವಿಶೇಷವಾಗಿ ದಕ್ಷಣ ಏಶಿಯಾ ರಾಷ್ಟ್ರಗಳಲ್ಲಿ ಬಹಳಷ್ಟು ಅಂತರವಿದೆ. ಇಲ್ಲಿ ವಿವರಿಸಿದ ವಿಧಾನಗಳಲ್ಲಿ ಈ ಅಂತರವನ್ನು ಅವರಲ್ಲಿ ಒಗ್ಗಟ್ಟನ್ನು ಬಲಪಡಿಸುವದರೊಂದಿಗೆ ಮತ್ತು ಅವರಿಗೆ ಸಹಾಯ ಮಾಡಲು ಮುಂದೆ ಬಂದ ಸಂಸ್ಥೆಗಳ ಪ್ರಯತ್ನದಿಂದ ವೃದ್ಧಿಪಡಿಸುವದಿದೆ. ಇಲ್ಲಿ ಭಾಗವಹಿಸಿದ ಕೆಲವರು ಒಳ್ಳೆಯ ಶಿಕ್ಷಣ ಪಡೆದವರಾಗಿದ್ದು ಆತ್ಮವಿಶ್ವಾಸ ಉಳ್ಳವರೂ ಆಗಿದ್ದಾರೆ. ಕೊನೆಯ ಹಂತ ವಿಧಾನಕ್ಕಾಗಿ ಭಾಗವಹಿಸಿದವರು ತಮ್ಮ ಸ್ಥಳೀಯರೊಡನೆ ಕೂಡಿಕೊಂಡು ತಮ್ಮ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಕೆಲಸ ಮಾಡಬೇಕಾಗಿರುವದು.

ಇಲ್ಲಿ ಗೌರವಿಸುವದು ಅತ್ಯಂತ ಮಹತ್ವದ್ದಾಗಿದೆ ಏಕೆಂದರೆ ಪ್ರಶ್ನಿತ ಸಮುದಾಯಗಳ ಜನರು ಬಹುತೇಕವಾಗಿ ತಾರತಮ್ಯಕ್ಕೆ ಹಾಗೂ ಕೆಳಸ್ತರದ ಸಾಮಾಜಿಕ ಸ್ಥಾನಮಾಕ್ಕೊಳಪಟ್ಟವರಾಗಿದ್ದು, ಅವರು ಕೇವಲ ಕೌಶಲ್ಯ ಮಾತ್ರವಲ್ಲ, ಸಮಾಜೋದ್ಧಾರ ಮನೋವೈಜ್ಞಾನಿಕ ಮತ್ತು ತಮ್ಮ ವರ್ತನೆಗಳನ್ನು ಮೇಲ್ಮೆಗೊಳಿಸಿಕೊಂಡು ತಮ್ಮ ಸಮಸ್ಯೆಗಳನ್ನು ಸರಕಾರದ ಅಧಿಕಾರಿಗಳವರೆಗೆ ಕೊಂಡೊಯ್ಯುವ ಬಗ್ಗೆ ಸಮರ್ಥ ಚಿಂತನೆ ಮಾಡಬೇಕಿದೆ. ಅವರು ಕಡಿಮೆ ಶಿಕ್ಷಣ ಹೊಂದಿದವರಾಗಿದ್ದಾರೆ ಅಥವಾ ಕಲಿಕೆಯ ಸ್ಥಿತಿಗತಿಗಳನ್ನು ಬಲ್ಲವರಾಗಿದ್ದಾರೆ, ಸಾಮರ್ಥ್ಯದಲ್ಲಿ ಕೆಳಮಟ್ಟದಲ್ಲಿದ್ದಾರೆ, ಕೆಲವರು ಮಾತ್ರ ಕೌಶಲ್ಯಗಳನ್ನು ಉಳ್ಳವರಾಗಿದ್ದಾರೆ. ಅವರು ಅಧಿಕಾರಿಗಳಿಂದ ಭಾಷಣ ಕೇಳುವಷ್ಟು ಸಾಮಾಜಿಕರಾಗಿದ್ದಾರೆ, ಅಧಿಕಾರಿಗಳ ಮುಂದೆ ತಲೆಭಾಗಿ ಮೂಕರಾಗಿ ನಿಲ್ಲುವವರಾಗಿದ್ದಾರೆ. ಇದನ್ನು ಬದಲಾವಣೆ ಮಾಡಲು ಬಹಳಷ್ಟು ವಿಧಾನ ಮತ್ತು ಸಮಯ ಬೇಕಾಗುತ್ತದೆ.

ಇದು ತಪ್ಪು ತಿಳುವಳಿಕೆಯಾಗುತ್ತದೇನೆಂದರೆ ಕಾರ್ಯಾಗಾರದ ಅವಧಿಯಂತಹ ಎರಡು ದಿನಗಳಲ್ಲಿ ಸಾಧನೆ ಆಗುತ್ತದೆ ಎಂದು ನಿರೀಕ್ಷಿಸುವದು. ಈ ಕ್ರಮ ವಿಧಾನ ಶಾಸ್ತ್ರವು ಆ ವಿಧಾನವನ್ನು ಪ್ರಾರಂಭಿಸುವ ಉದ್ದೇಶವನ್ನು ಮಾತ್ರ ಹೊಂದಿರುತ್ತದೆ. ಇದು ಭಾಗವಹಿಸಿದವರಿಗೆ ಮಾರ್ಗದರ್ಶನ ಮಾಡುತ್ತದೆ - ಅವರೇ ತಮ್ಮ ಸಮಸ್ಯೆಗಳನ್ನು ಗುರುತಿಸುವಲ್ಲಿ ಅವುಗಳನ್ನು

ಹೊಂದಿಸಿಕೊಳ್ಳುವಲ್ಲಿ ಪರಿಹರಿಸುವ ಕ್ರಿಯಾ ಯೋಜನೆಯನ್ನು ರೂಪಿಸುವಲ್ಲಿ ಮತ್ತು ಅದನ್ನು ಸರಕಾರದ ಅಧಿಕಾರಿಗಳಲ್ಲಿಗೆ ಅಂದರೆ ನಿರ್ಣಯ ತೆಗೆದುಕೊಳ್ಳುವವರಲ್ಲಿಗೆ ಒಯ್ದು ಅರಿಕೆ ಮಾಡಿಕೊಳ್ಳುವಲ್ಲಿ - ಆ ಜನರೇ ಬದಲಾವಣೆಯನ್ನು ತರುವವರು.

ಸಹಭಾಗಿತ್ವ ಕಲಿಕೆಯ ಸಾಹಿತ್ಯದಿಂದ ಆಯ್ದು ಕೆಲ ಅಂಶಗಳಿಂದ ಈ ಕ್ರಮ ವಿಧಾನಶಾಸ್ತ್ರವನ್ನು ಸಿದ್ಧಪಡಿಸಲಾಗಿದೆ. ಇದು ಒಂದು ಮುಖ್ಯ ಅಂಶವನ್ನು ಹೊರತುಪಡಿಸಿ ಮೂಲದ್ದಲ್ಲ. ಇದು ಅದೇನೆಂದರೆ, ಸಹಭಾಗಿತ್ವದ ಚಟುವಟಿಕೆ ಮತ್ತು ಅದರ ಮುಂದುವರೆದ ಚರ್ಚೆ, ಸ್ವಯಂರ್ಜಿದಂತೆ ಕಂಡುಬರುವ, ಬದಲಾಗಿ (ಉದಾ : ನಕಾಶೆ ರೂಪಿಸುವ, ಸಮಯಾನುಸಾರ ಪಾತ್ರಾಭಿನಯ, ವೆಂಗ್ಯ, ವೆನ್ನ ಆಕೃತಿಗಳು ಇತ್ಯಾದಿ), ಇದು ಒಂದು ಚಟುವಟಿಕೆಯಿಂದ ಪ್ರಾರಂಭವಾಗುತ್ತದೆ ಮತ್ತು ಅದು ವಿವಿಧ ಆಂತರಿಕ ವಿಷಯಗಳ ಮೇಲೆ ಅಭಿವೃದ್ಧಿಯಾಗುತ್ತದೆ ಹಾಗೂ ಗಮನಿಸಬಹುದಾದ ಚಟುವಟಿಕೆಗಳಾಗಿದೆ. ಅವು ಇಂತಿವೆ. ಮಾಹಿತಿ ಸಂಗ್ರಹ (ಮೌಲ್ಯೀಕರಣ) ಅವುಗಳ ವಿಶ್ಲೇಷಣೆ (ಯಾವ ಬದಲಾವಣೆಯನ್ನು ನಿರ್ಧರಿಸುವ) ಮತ್ತು ಬದಲಾವಣೆಗಳನ್ನು ತರುವ ಸಲುವಾಗಿ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸುವದು. ಹೀಗಾಗಿ ಅದರಲ್ಲಿ ಒಂದು ಆಂತರಿಕ ವಿಧಾನವಿದೆ. ಪ್ರತ್ಯೇಕವಾಗಿ ಉಪಯೋಗಿಸಿದರೆ, ಸಹಭಾಗಿ ವಿಧಾನವು ಬಹಳಷ್ಟುಸಲ ಒಂದೇ ತರವಾಗಿ ಕಂಡು ಬರುವುದಲ್ಲದೆ ಮೌಲ್ಯೀಕರಣಕ್ಕೆ ಕೂಡುತ್ತದೆ. ಆದರೆ ಕ್ರಮಬದ್ಧ ವಿಶ್ಲೇಷಣೆ ಅಥವಾ ಕ್ರಿಯಾ ಯೋಜನೆಯೆಡೆಗೆ ಸಾಗುವದಿಲ್ಲ.

**<u>ಕಾಲಾವಧಿ : 1 ಸಮಯಾನುಸಾರ :</u>**

ಸಮಯಾನುಸಾರದ ತತ್ವಗಳನ್ನು ಫಲಕದ ಮೇಲೆ ಬರೆದು ಗುಂಪುಗಳಿಗೆ ವಿವರಿಸಲಾಯಿತು. ದಾರಿಯನ್ನು ನಿಗದಿಗೊಳಿಸುವದು ಏಳುವ ಕ್ಷಣದಿಂದ ಹಿಡಿದು ಮಲಗುವ ಕ್ಷಣದ ತನಕ ಆಗಿದೆ. ಒಂದೊಂದು ಚಟುವಟಿಕೆಗಳಿಗೆ ಇಂತಿಷ್ಟು ಸಮಯವೆಂದು ನಿಗದಿಪಡಿಸಿ ಅದರಂತೆ ಸಮಯವನ್ನು ಯಾವ ಯಾವ ಚಟುವಟಿಕೆಗಳಿಗೆ ಎಷ್ಟೆಷ್ಟು ಸಮಯ ನೀಡಬೇಕೆಂದು ವಿವರಿಸಲಾಯಿತು.

ನಂತರ ಭಾಗವಹಿಸಿದವರನ್ನು 6 ಕ್ಕಿಂತ ಹೆಚ್ಚಾಗದಂತೆ ಗುಂಪುಗಳಲ್ಲಿ ವಿಂಗಡಿಸಿ ಪ್ರತಿಯೊಂದು ಗುಂಪಿಗೆ ಒಬ್ಬರನ್ನು ಸಹಾಯಕರನ್ನು ಒದಗಿಸಿ ಎಲ್ಲರಿಗೂ ಕಾಗದ ಪೆನ್ನುಗಳನ್ನು ಒದಗಿಸಲಾಯಿತು. ಒದಗಿಸಿದ ಕಾಗದದ ಹಾಳೆಯು ಅವರು ಬರೆಯಲು ಮತ್ತು ರೇಖಾಕೃತಿಗಳನ್ನು ಚಿತ್ರಿಸಲು ಬರುವಂತಿಹದಿತ್ತು.

ಪ್ರತಿಯೊಂದು ಗುಂಪು ವೇಳಾ-ಪಟ್ಟಿಯನ್ನು ಸಿದ್ಧಪಡಿಸಬೇಕು. ಯಾವ ಗುಂಪಿನಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದೆಯೋ ಅಲ್ಲಿ ಸಹಾಯಕರು ಪ್ರತಿ ವ್ಯಕ್ತಿಯ ಮೇಲೆ ಹೆಚ್ಚಿನ ಗಮನ ನೀಡಬೇಕು. ಇದಕ್ಕಾಗಿ ಹೆಚ್ಚಿನ ಸಮಯವನ್ನು ಕೊಡಲಾಯಿತು. ಶಿಕ್ಷಿತ ಭಾಗವಹಿಸಿದವರಿದ್ದರೆ ಅವರು ಇನ್ನೊಬ್ಬರ ಸಹಾಯವಿಲ್ಲದೆ ಒಮ್ಮೆ ಪ್ರಾರಂಭಿಸಿದರೆ ವೇಳಾಪಟ್ಟಿಗನುಸಾರವಾಗಿ ಮುಂದುವರೆಯಲು ಸಾಧ್ಯ.

ಬದಲಾಗಿ ಭಾಗವಹಿಸಿದರಿಗೆ ತಮ್ಮ ಮನೆ ಅದರ ಸುತ್ತಲಿನ ಪರಿಸರ ಹಾಗೂ ಜನರುಳ್ಳ ಚಿತ್ರಗಳನ್ನು ಬರೆಯಲು ಕೇಳಿಕೊಳ್ಳುವದು ಇದನ್ನು ಮಕ್ಕಲು ಮತ್ತು ಹದಿ ಹರೆಯವದರಿಗಾಗಿ ಆಧ್ಯತೆ ಕೊಡುವದು. ಆದರೆ ವಯಸ್ಕರು ಸಿದ್ಧಪಡಿಸಿಧ ವೇಳಾಪಟ್ಟಿಗಳು ಹೆಚ್ಚು ವ್ಯವಸ್ಥಿತವುಳ್ಳವಾಗಿದು ಮಾಹಿತಿ ಪೂರ್ಣವಾಗಿರುತ್ತದೆ.

ವೇಳಾಪಟ್ಟಿಗಳು ಸಿದ್ಧವಾದ ಮೇಲೆ ಅವುಗಳನ್ನು ಗುಂಪುಗಳ ಪ್ರಕಾರ ಗೋಡೆ ಅಥವಾ ಫಲಕಗಳ ಮೇಲೆ ತಾಕಿಸುವದು. ನಂತರ ಎಲ್ಲ ಗುಂಪುಗಳ ಸಮಕ್ಷಮದಲ್ಲಿ ಪ್ರತಿಯೊಬ್ಬ ಮಹಿಳೆಯರನ್ನು ಕರೆದು ಸಹಾಯಕರ ಸಹಾಯದಿಂದ ಪ್ರತಿಯೊಂದು ವೇಳಾಪಟ್ಟಿಯ ಬಗ್ಗೆ ಅವರ ದಿನವು ಹೇಗಿರುತ್ತದೆ ಎಂಬುದರ ಬಗ್ಗೆ ವಿವರಿಸಲು ಹೇಳುವುದು.

ಇದನ್ನು ಚರ್ಚೆಯ ಪೀಠಿಕೆಯಾಗಿ ಉಪಯೋಗಿಸಬಹುದು; ಯಾಕೆ ಕೆಲವು ಚಟುವಟಿಕೆಗಳಿಗೆ ಒತ್ತು ಕೊಡಲಾಗಿದೆ. ಕೆಲವನ್ನು ಬಿಟ್ಟು ಬಿಡಲಾಗಿದೆ, ಉಳಿದವುಗಳ ಬಗ್ಗೆ ಏನು ; ಮಕ್ಕಳನ್ನು ತೊಡಗಿಸಲಾಗಿದೆಯೇ ಪುರುಷರನ್ನು ತೊಡಗಿಸಲಾಗಿದೆಯೇ ತ್ಯಾದಿ.

ಈ ಮಾಹಿತಿಯನ್ನು ರೂಪಾಂಶದಲ್ಲೂ ತೋರಿಸಲು ಸಹ ಸಾಧ್ಯವಿದೆ. ಇದರಲ್ಲಿ ಚಟುವಟಿಕೆಗಳನ್ನು (ಮನೆಗೆಲಸ, ಮಕ್ಕಳ ಪಾಲನೆ ಇತ್ಯಾದಿ) ಗುರುತಿಸಿ ಪಟ್ಟಿ ಮಾಡಿ ಎಡಗಡೆಯ ಸಾಲಿನಲ್ಲಿ ಇಡಬಹುದು. (ಈ ಕೆಳಗಿನ ಉದಾಹರಣೆಗಳನ್ನು ನೋಡಿ) ಪ್ರತಿಯೊಂದು ಸಾಲಿನಲ್ಲಿ 6 ದೊಡ್ಡ ಸೊನ್ನೆಗಳನ್ನು ಪುರುಷರು ಮತ್ತು ಮಹಿಳೆಯರ ನಡುವೆ ಯಾರು ಹೆಚ್ಚಿನ ಚಟುವಟಿಕೆಗಳನ್ನು ನಡೆಸುವರೆಂಬ ಪ್ರಕಾರ ಹಂಚುವದು. ಈ ಸೊನ್ನೆಗಳನ್ನು ಕೆಳಗೆ ಕೂಡಿಸಿಡುವದು. ಇದು ಯಾವುದೇ ವ್ಯತ್ಯಾಸವಾಗದಂತೆ ವಿವರಿಸುವದೇನೆಂದರೆ ಮಹಿಳೆಯರು ಮತ್ತು ಹೆಣ್ಣುಮಕ್ಕಳು ಪುರುಷರಿಗಿಂತ ಅಥವಾ ಗಂಡು ಮಕ್ಕಳಿಗಿಂತ ಹೆಚ್ಚು ಕೆಲಸ ಮಾಡುತ್ತಾರೆಂಬುದನ್ನು ಇದು ಇಲ್ಲಿಗೆ ಚರ್ಚೆ ಮುಗಿಯುವುದು.

<u>ರೂಪಾಂಶದ ಉದಾಹರಣೆ :</u> (ಟಿಪ್ಪಣಿ : ಎಲ್ಲ ಶಬ್ದಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಅಂದರೆ ಕಾರ್ಯಾಗಾರದಲ್ಲಿ ಬಳಸಿದ್ದರಲ್ಲಿ ಬರೆಯುವದು, ಎಲ್ಲ ಉದಾಹರಣೆಗಳಲ್ಲಿ)

| ಚಟುವಟಿಕೆಗಳು<br>ಅಡಿಗೆ ಮಾಡುವದು<br>ಸ್ವಚ್ಛ ಮಾಡುವದು | ಪುರುಷರು | ಮಹಿಳೆಯರು<br>●●●● | ಗಂಡು ಮಕ್ಕಲು | ಹೆಣ್ಣು ಮಕ್ಕಳು<br>●● |
|---|---|---|---|---|
| ಹೊರಗೆಲಸ (ಗಳಿಕೆ) | | ● | ● | ● |
| ಮಕ್ಕಳ ಪಾಲನೆ | | ●●● | ● | ●●● |
| ನೀರು ತರುವುದು | ●●● | ●●● | | ●● |
| ಇತ್ಯಾದಿ ಒಟ್ಟು | 3 | 11 | 2 | 8 |

<u>ಕಾಲಾವಧಿ 2 : ಮಾಹಿತಿ ವಿಶ್ಲೇಷಣೆ</u>

ಬಹಳ ದೊಡ್ಡದ ಕಾಗದದ ಹಾಳೆಯನ್ನು ಗೋಡೆಗೆ ತಾಕಿಸಲಾಗಿದೆ. ಎಲ್ಲ ಗುಂಪುಗಳ ಸಹಾಯದೊಂದಿಗೆ, ವೇಳಾಪಟ್ಟಿಯಲ್ಲಿನ ಎಲ್ಲ ಮಾಹಿತಿಯನ್ನು 5-6 ಭಾಗಗಳಲ್ಲಿ ಗುಂಪು ಮಾಡಿಡಲಾಗಿದೆ, ಅವುಗಳನ್ನು ಕಾರ್ಯಾಗಾರದಲ್ಲಿ ಬಳಸಿದ ಭಾಷೆಯಲ್ಲಿ ಎಡಗಡೆಯ ಸಾಲಿನಲ್ಲಿ ಪಟ್ಟಿ ಮಾಡಲಾಗಿದೆ. ಉದಾ : ಮನೆಗೆಲಸ, ನೀರು ತರುವುದು, ಮಕ್ಕಳ ಪಾಲನೆ ಮತ್ತು ಬೆಳೆಸುವದು, ಹೊರಗೆಲಸ ಇತ್ಯಾದಿ ಮುಂದಿನ ಸಾಲಿನ ಮೇಲಿನ ಭಾಗದಲ್ಲಿ ನಗುವಿನ ಮುಖ (ಒಂದು ಬಣ್ಣದಲ್ಲಿ) ಮತ್ತು ಕಳಗುಂದಿದ ಮುಖ (ಮತ್ತೊಂದು ಬಣ್ಣದಲ್ಲಿ) ವಿವರಣೆ ನೀಡಲಾಗಿದೆ.

ನಂತರ ಗುಂಪನ್ನು ಕೇಳಲಾಗುತ್ತದೆ - ಪ್ರಶ್ನಿತ ಚಟುವಟಿಕೆಯಿಂದ ಯಾರು ಆನಂದದಿಂದ ಇದ್ದಾರೆ. ಅಥವಾ ಯಾರು ಒಳ್ಳೆಯ ಭಾವನೆಯಿಂದ ಇಲ್ಲವೆಂದು. ಆನಂದ ಭಾವನೆಯ ಮುಖ ಮತ್ತು ಕೆಟ್ಟ ಭಾವನೆಯ ಮುಖಗಳನ್ನು ಅವರು ಒತ್ತುಕೊಡುವ ಮೇರೆಗೆ ಹಂಚಲಾಗುತ್ತದೆ. ಮೂರನೆಯ ಸಾಲಿನಲ್ಲಿ ಅವರು ಕೊಡುವ ಕನಿಷ್ಠ ಒಂದು ಒಳ್ಳೆಯ ಒಂದು ಕೆಟ್ಟ ಕಾರಣಗಳನ್ನು ಬರೆಯಲಾಗುತ್ತದೆ. ಇದನ್ನು ಪಟ್ಟಿ ಮಾಡಿದ ಎಲ್ಲ ಚಟುವಟಿಕೆಗಳಿಗೆ ಪುನರಪಿಗೊಳಿಸಲಾಗುತ್ತದೆ. (ಉದಾ : ನೋಡಿ)

<u>ರೂಪಾಂಶ ಅಥವಾ ಕೋಷ್ಟಕ ವಿಶ್ಲೇಷಣೆಯ ಉದಾಹರಣೆ :</u>

| ಚಟುವಟಿಕೆ | ○ ಒಳ್ಳೆಯ ಭಾವನೆ | ● ಕೆಟ್ಟ ಭಾವನೆ | ಕಾರಣಗಳು |
|---|---|---|---|
| ಮನೆಗೆಲಸ | ○○○ | ●● | ○ ಇತ್ಯಾತ್ಮಕ 'ನಮ್ಮದು '<br>● ಪುರುಷರು ಗಂಡು ಮಕ್ಕಳು ಸಹಾಯ ಮಾಡುವದಿಲ್ಲ. |
| ಹೊರಗೆಲಸ | | ●●●<br>●●● | ● ಕಡಿಮೆ ಕೂಲಿ, ಬೈಗುಳ, ದಣಿವು ಬಿಸಿಲಿನ ತಾಪ, ತಾರತಮ್ಯ |
| ಮಕ್ಕಳ ಪಾಲನೆ | ○ | ●●● | ○ ಗಂಡುಮಗ ವೃದ್ಧಾಪ್ಯಕ್ಕೆ<br>● ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚು ಖರ್ಚು |
| ನೀರು ತರುವದು | ○ | ●●● | ○ ಮನೆಯಲ್ಲಿ ನಲ್ಲಿ ಇದ್ದರೆ<br>● ನಲ್ಲಿ ಅಥವಾ ಭಾವಿ ಮನೆಯಿಂದ ಬಹಳ ದೂರ |
| ಇತ್ಯಾದಿ ೯ | | | |

ಈ ರೀತಿಯಲ್ಲಿ ಭಾಗವಹಿಸಿದವರು ತಮ್ಮ ದೈನಂದಿನ ಜೀವನದಲ್ಲಿ ನಡೆಸುವ ಚಟುವಟಿಕೆಗಳ ಮೇಲೆ ವಿಶ್ಲೇಷಣೆ ಮತ್ತು ಪ್ರತಿಕ್ರಿಯೆಗಳ ವಿಧಾನಕ್ಕೊಳಪಡುವರು. ಕೆಲವು ಹೆಚ್ಚಿನ ರೀತಿಯಲ್ಲಿ ಊಹಾತ್ಮಕವಾಗಿರುವವು - ಕಡಿಮೆ ಕೂಲಿ ಹೊರಗೆಲಸಗಳಿಗಾಗಿ, ಕೆಲವು ಅನೂಹಾತ್ಮಕವುಳ್ಳವು. ಉದಾ : ಮಹಿಳೆಯರು ಮನೆಗೆಲಸಗಳಲ್ಲಿ ಆನಂದಿಸುವೆವು ಎಂದು ಹೇಳಬಹುದು. ಯಾಕೆಂದರೆ ಅಲ್ಲಿ 'ನಮ್ಮದು' ಎಂಬ ಭಾವನೆ ಅಂದರೆ ಆತ್ಮ ಗೌರವಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಮಕ್ಕಳನ್ನು ಬೆಳೆಸುವದು ಕಠಿಣ ತಮ್ಮ ಮತ್ತು ಕೆಲಸವಾಗಿದ್ದು ಬಹಳಷ್ಟು ಮುಖಗಳು ಕಿವುಚಿಕೊಳ್ಳುವದನ್ನು ಕಾಣಬಹುದು ಮತ್ತು ಅದು ಆನಂದದ ಕೆಲಸವಲ್ಲ.

ನಂತರ ಭಾಗವಹಿಸಿದವರು ತಮ್ಮ ಸಹಾಯಕರೊಂದಿಗೆ ತಮ್ಮ ಮುಂಚಿನ ಗುಂಪುಗಳಿಗೆ ತೆರಳುವರು. ಕಿವುಚು ಮುಖಗಳು ಗುರುತಿಸಿದ ಸಮಸ್ಯೆಗಳನ್ನು ಕಡಿಮೆ ಮಾಡಿಕೊಳ್ಳಲು ಪ್ರತಿಯೊಂದು ಪ್ರಕಾರದ ಚಟುವಟಿಕೆಗಳ ಕುರಿತಾಗಿ, ಅವರನ್ನು ಏನನ್ನು ಬದಲಾವಣೆ ಮಾಡಬೇಕೆಂದು ಪರಿಶೀಲಿಸುತ್ತೀರಿ ಎಂದು ಕೇಳಲಾಗುತ್ತದೆ. ಇದನ್ನು ಕಾರ್ಯಾಗಾರದ ಭಾಷೆಯಲ್ಲಿ ಗುಂಪಿನ ಸಹಾಯಕರ ಸಹಾಯದಿಂದ, ಒಂದು ದೊಡ್ಡ ಹಾಳೆಯಲ್ಲಿ ಬರೆಯಬೇಕು.

ಈ ಪರಿಣಾಮಗಳನ್ನು ನಂತರ ಒಟ್ಟುಗೂಡಿಸಿ ಸಮಗ್ರ ಗುಂಪಿನ ಮುಂದೆ ಮಂಡಿಸಲಾಗುವದು. ಪ್ರತಿಯೊಂದು ಪ್ರಕರಣದಲ್ಲಿ ಒಂದು ಗುಂಪಿನಿಂದ ಒಬ್ಬರನ್ನು ಕರೆದು ಪ್ರಸ್ತುತ ಪಡಿಸಲು ಕೋರಲಾಗುವದು, ಸಹಾಯಕರು ಅವರಿಗೆ ನೆರವಾಗಬಹುದು ಯಾಕೆಂದರೆ ಆತ / ಅವಳು ಓದಲಾಗದಿರಬಹುದು. ಸಾರ್ವಜನಿಕವಾಗಿ ಮಾಹಿತಿಯನ್ನು ಯಾವುದೇ ಸಂಕೋಚ ಅಳುಕಿಲ್ಲದೆ ಪ್ರಸ್ತುತ ಪಡಿಸುವ ಸಾಮರ್ಥ್ಯವನ್ನು ಮಹಿಳೆಯರಲ್ಲಿ ಬಲಪಡಿಸುವದು ಒಂದು ಬಹುಮುಖ್ಯವಾದ ಕಾರ್ಯಾಗಾರದ ವಿಧಾನದ ಭಾಗವಾಗಿರುವದು.

<u>ಕಾಲಾವಧಿ : 3 ಸಾಂಸ್ಕೃತಿಕ ಚಟುವಟಿಕೆಗಳು</u>

ಈಗಾಗಲೇ ಮೇಲೆ ಹೇಳಿದಂತೆ ಬೇರೆ ರೀತಿಯ ಕಾಲಾವಧಿಯನ್ನು ನಡೆಸುವದು ಒಳ್ಳೆಯದು, ಇದರಿಂದ ದೈನಂದಿನ ಜೀವನ ಮತ್ತು ಸಮಸ್ಯೆಗಳತ್ತಲೇ ಕೇಂದ್ರೀಕೃತರಾಗಿರುವ ಭಾಗವಹಿಸಿದವರಿಗೆ ಬಿಡುವು ಕೊಟ್ಟಂತಾಗುವದು. ಇದನ್ನು ಮಾಹಿತಿ ಸಂಗ್ರಹ ಕಾರ್ಯಕ್ಕಾಗಿ ಬಳಸಬಹುದು. ಸಾಂಸ್ಕೃತಿಕ ಚಟುವಟಿಕೆಗಳ - ನಾಟಕಗಳು, ಚಿತ್ರ ಬರೆಯುವದು ಬಣ್ಣ ತುಂಬುವದು ಅಥವಾ ಕಥೆಗಳನ್ನು ಹೇಳುವದು ಮುಂತಾದವುಗಳ ಮೂಲಕ. ಒಂದು ಪಕ್ಷ ನಾಟಕಗಳನ್ನು ಆಯ್ಕೆ ಮಾಡಿದರೆ, - ಇವು ಹೆಚ್ಚಿನ ಸಾಮಗ್ರಿಗಳನ್ನು ಅಪೇಕ್ಷಿಸುವದಿಲ್ಲ ಅಥವಾ ಹೆಚ್ಚಿನ ಕೌಶಲ್ಯಗಳನ್ನು ಸಹ - ಆಗ ಗುಂಪುಗಳನ್ನು ಪುನರ್ ವಿಂಗಡನೆ ಮಾಡಲಾಗುತ್ತದೆ. ಕನಿಷ್ಟ 8-9 ಸದಸ್ಯರು ಒಳಗೊಳ್ಳುವಂತೆ ಪಾತ್ರಗಳ ಹಂಚಿಕೆ ಮಾಡಲು ಇದು ಅಗತ್ಯವಾಗಿರುತ್ತದೆ.

ನಾಟಕದ ತಲೆಬರಹವನ್ನು ಕೊಡಲಾಗುತ್ತದೆ ಅಥವಾ ಅರ್ಧ ಕಥೆಯನ್ನು, ಅದನ್ನು ಗುಂಪು ಪೂರ್ತಿಗೊಳಿಸುತ್ತದೆ. 'ಮನೆಯಲ್ಲಿ ಒಂದು ದಿನ' ಅಥವಾ 'ಶಾಲೆಯಲ್ಲಿ ಒಂದು ದಿನ' (ಹದಿಹರೆಯದವರಿಗೆ) ಈ ತಲೆಬರಹಗಳನ್ನು ಉಪಯೋಗಿಸಬಹುದಾಗಿದೆ. ವಸ್ತು ಬಹಳೇ ಸರಳವಾಗಿರತಕ್ಕದ್ದು, ಗಮನಿಸತಕ್ಕದ್ದು - ' ಉತ್ಸವ / ಜಾತ್ರೆಯ ದಿನ' ವು ಒಳ್ಳೆಯದು, ಅದನ್ನು ಮನೆಯಲ್ಲಿನ ಚಟುವಟಿಕೆಗಳಿಗೆ ಸೀಮಿತಗೊಳಿಸಿದರೆ ಮಾತ್ರ, ಇಲ್ಲದಿದ್ದರೆ ಅದು ಅತ್ಯಂತ ಅಪಾಯಕಾರಿ ಅದನ್ನು ಧಾರ್ಮಿಕ ಆಚರಣೆಯ ವಿಧಾನದ ಅಥವಾ ಅರ್ಪಣೆಯ ಚಟುವಟಿಕೆಗಳಿಗೆ ಬಳಸಿದಲ್ಲಿ 'ಒಂದು ಕೆಟ್ಟ ದಿನ' ಇದು ಸಮಸ್ಯೆಗಳನ್ನು ಹೇಳಿಕೊಳ್ಳುವಲ್ಲಿ ಬಳಸಿದಾಗ ಬಹಳೇ ಉಪಯೋಗಕಾರಿ, ಲೈಂಗಿಕ ವೃತ್ತಿಯಲ್ಲಿ ತೊಡಗಿದವರಿಗೆ 'ಈ ಸಂಜೆಯಲ್ಲಿ' ಸಮರ್ಥವಾದ ತಲೆಬರಹವಾಗಬಹುದು. ಅರ್ಧ ಕಥೆಗಳನ್ನು ಕೊಟ್ಟರೆ ಅದನ್ನು ಪೂರ್ತಿ ಮಾಡಬೇಕಾದರೆ ಪಾತ್ರಧಾರಿಗಳಿಗೆ ಆ ಪರಿಸ್ಥಿತಿಗಳು ಪರಿಚಿತವಾಗಿರಬೇಕಾಗುತ್ತದೆ. ಒಂದು ಹಾಸ್ಯ ಪಾತ್ರವನ್ನು (ಉದಾ : ಕುಡುಕ) ಪ್ರಸ್ತುತ ಪಡಿಸುವದು ಉಪಯೋಗವುಳ್ಳದ್ದಾಗಿರುತ್ತದೆ.

ಒಂದು ಪೂರ್ತಿ ಮುಂಜಾವಿನ ಅಥವಾ ಮಧ್ಯಾಹ್ನದ ಕಾಲಾವಧಿಯು ನಾಟಕವನ್ನು ರೂಪಿಸುವದು ಮತ್ತು ಅಭ್ಯಾಸ ಮಾಡುವುದು ನಂತರ ಅದನ್ನು ಪ್ರಸ್ತುತ ಪಡಿಸಲು, ಗುಂಪಿಗೆ ಅಗತ್ಯವಾಗಿರುತ್ತದೆ. ತದನಂತರ, ಕಥೆಯ ಅಧಿಕೃತತೆ, ಪಾತ್ರಗಳ, ಪ್ರೇಕ್ಷಕರ ಅನಿಸಿಕೆಗಳ ಬಗ್ಗೆ ಚರ್ಚೆ ನಡೆಯುತ್ತದೆ.

<u>ಕಾಲಾವಧಿ : 4 ಕ್ರಿಯಾ ಯೋಜನೆಯ ಅಭಿವೃದ್ಧಿ :</u>

ಮೂಲ ವೇಳಾಪಟ್ಟಿಯಿಂದ ಹೊಮ್ಮಿದ ಮಾಹಿತಿಗಳ ಕುರಿತು ವ್ಯವಹರಿಸುವಲ್ಲಿ ಇದು ಕೊನೆಯ ಕಾಲಾವಧಿಯಾಗಿರುತ್ತದೆ. ದೊಡ್ಡ ದೊಡ್ಡ ಹಾಳೆಗಳನ್ನು ಗೋಡೆಗೆ ತಗಲಿಸಿರುವ ಅಗತ್ಯವಿರುತ್ತದೆ. 'ಏನು ಬದಲಾವಣೆ ಮಾಡಬೇಕಿದೆ' ಎಂಬು ಪ್ರಸ್ತುತಿಗಳನ್ನು ತಾಕಿಸಬೇಕು. ಇಡೀ ಗುಂಪು ಹಿಂದಿನ ಪ್ರಸ್ತುತಿಗಳಿಂದ ಪ್ರತಿಯೊಂದು ಪ್ರಕಾರದ ಚಟುವಟಿಕೆಗಳಿಂದ ಏನು ಮುಖ್ಯ

ಸಂದೇಶಗಳು ಹೊಮ್ಮಿದವೆಂಬುದನ್ನು ಪರಿಶೀಲಿಸುತ್ತದೆ. ಇವುಗಳನ್ನು ಎಡಗಡೆಯ ಸಾಲಿನಲ್ಲಿ ಪಟ್ಟಿ ಮಾಡಲಾಗುತ್ತದೆ. ಉದಾ : ಮನೆಗೆಲಸದ ಕುರಿತಾದ ಸಂದೇಶವು ಪುರುಷರು ಮತ್ತು ಗಂಡು ಮಕ್ಕಳು ಕೆಲಸವನ್ನು ಹಂಚಿಕೊಳ್ಳಬಹುದು. ಹೊರಗೆಲಸದ ಬಗ್ಗೆ ಸಂದೇಶವು ದಿನಗೂಲಿಯನ್ನು ಹೆಚ್ಚಿಸಬೇಕು ಇತ್ಯಾದಿ.

ಉಳಿದ ಸಾಲುಗಳ ನೆತ್ತಿಯ ಮೇಲೆ ಈ ರೀತಿಯ ತಲೆಬರಹಗಳು ಇರಬೇಕು (ಕಾರ್ಯಾಗಾರದಲ್ಲಿ ಬಳಸಿದ ಭಾಷೆಯಲ್ಲಿರಬೇಕು) : ಯಾರಿಗೆ ಈ ಸಂದೇಶವನ್ನು ಕಳಿಸಲಾಗಿದೆ? ಯಾರು ಈ ಸಂದೇಶಗಳನ್ನು ಪಟ್ಟಿ ಮಾಡಿ ರವಾನಿಸಲು ಸಹಕರಿಸುವರು? ಹೇಗೆ ಇವುಗಳನ್ನು ನಾವು ಯಾವಾಗ ಮತ್ತು ಎಲ್ಲಿ ಇವುಗಳನ್ನು ನಾವು ಕಳಿಸಬಹುದು? ಮೊದಲನೆಯ ಸಂದೇಶಕ್ಕಾಗಿ ಗುಂಪಿನೊಂದಿಗೆ ಯೋಚಿಸಿದಂತೆ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯುವ ಚಟುವಟಿಕೆಯನ್ನು ಮಾಡಲಾಗುವದು. ಸಾಧ್ಯವಾದರೆ ಒಂದೇ ಕ್ಷೇತ್ರದ ಜನರುಳ್ಳಂತೆ ಸಣ್ಣ ಸಣ್ಣ ಗುಂಪಿನಲ್ಲಿ ವಿಂಗಡನೆಯಾಗುವದು ಆದರಿಂದ ಅವರು ಭವಿಷ್ಯದಲ್ಲಿ ಈ ಕ್ರಿಯಾ ಯೋಜನೆಯನ್ನು ಅನುಷ್ಠಾನಕ್ಕೆ ತರಬಹುದಾಗಿದೆ (ಉದಾಹರಣೆಯನ್ನು ನೋಡಿ)

<u>ಸಮರ್ಥನಾ ಯೋಜನೆಯ ಅಭಿವೃದ್ಧಿಯ ಒಂದು ಉದಾಹರಣೆ :</u>

| ಸಂದೇಶಗಳು | ಯಾರಿಗೆ | ಯಾರಿಂದ | ಹೇಗೆ | ಎಲ್ಲಿ ಮತ್ತು ಯಾವಾಗ |
|---|---|---|---|---|
| ಪುರುಷರು ಮತ್ತು ಗಂಡು ಮಕ್ಕಳು ಮನೆಗೆಲಸಗಳಲ್ಲಿ ಸಹಕರಿಸಬೇಕು | ಗಂಡಂದಿರು ಮಹಿಳೆಯರಿಗೆ | ಮಹಿಳಾ ಮನೆ ಸದಸ್ಯರಿಂದ | ಚರ್ಚೆಯ ಮೂಲಕ | ಬಹಳಷ್ಟು ಸಲ ಮನೆಯಲ್ಲಿ |
| ಹೊರಗೆಲಸಗಳಿಗೆ ಮಹಿಳೆಯರಿಗೆ ದಿನಗೂಲಿಯನ್ನು ಹೆಚ್ಚಿಸಬೇಕು | ಭೂ ಒಡೆಯರು ಮಾಲೀಕರು ಗ್ರಾಮ ಪ್ರಮುಖರು | ಒಗಟ್ಟಾಗಿ ಎಲ್ಲ ಸ್ಥಳೀಯ ಮಹಿಳಾ ಗುಂಪು ಸದಸ್ಯರು | ಪ್ರಸ್ತುತಿಗಳಿಂದ ಸಭೆಗಳು ಕಟ್ಟಿ - ಮಾತು | ಕೆಲಸದ ಸ್ಥಳದಲ್ಲಿ |
| ನಮ್ಮ ಮಕ್ಕಳು ಶಾಲೆಗೆ ಹೋಗಲು ಸಹಕಾರಬೇಕು | ಶಿಕ್ಷಕರು ಸ್ಥಳೀಯ ಶಾಲಾ ಆಡಳಿತ ಮಂಡಳಿ ಬ್ಯಾಂಕ ಮ್ಯಾನೇಜರು ಗಳು | ಮಹಿಳೆಯರ ಗುಂಪುಗಳು, ಗ್ರಾಮ ಪಂಚಾಯತ ಸದಸ್ಯರು | ಸಭೆಗಳು ಹೋರಾಟ ಸಾಲದ ಪ್ರಸ್ತಾವನೆಗಳು | ಬಹಳಷ್ಟು ಸಲ ಶಾಲೆಯಲ್ಲಿ ಬ್ಯಾಂಕಿನಲ್ಲಿ |
| ಕುಡಿಯುವ ನೀರಿನ ಲಭ್ಯತೆ ನಮ್ಮ ಮನೆಯಲ್ಲಿ ಅಥವಾ ಮನೆಯ ಸಮೀಪ ಆಗಬೇಕೆಂದು ನಾವೆಲ್ಲ ಬಯಸುತ್ತೇವೆ<br><br>ಇತ್ಯಾದಿ | ಗ್ರಾಮ ಪಂಚಾಯತಿ ನೀರು ಸರಬರಾಜು ಸಮಿತಿ | ಗ್ರಾಮ ಪಂಚಾಯತ ಸದಸ್ಯರು ಮಹಿಳಾ ಗುಂಪು | ಸಭೆಗಳು, ನೇಮಣೂಕಿ ಕಟ್ಟಿ ಮಾತು | ಮತ್ತೆ ಮತ್ತೆ ಗ್ರಾಮ ಪಂಚಾಯತ ಕಾರ್ಯಾಲಯಕ್ಕೆ ಭೆಟ್ಟಿ ನೀಡುವದು. |

ಗುಂಪುಗಳ ಕೆಲಸ ಮುಗಿದಾದ ಮೇಲೆ, ಈ ಕ್ರಿಯಾ ಯೋಜನೆಯನ್ನು ಸಮಗ್ರ ಗುಂಪಿನ ಮುಂದೆ ಪ್ರಸ್ತುತ ಪಡಿಸಬೇಕು. ಬಿಟ್ಟುಹೋದ ಅಂಶಗಳ ಬಗ್ಗೆ ಹಾಗೂ ಇನ್ನೂ ಹೆಚ್ಚಿನ ಅಂಶಗಳನ್ನು ಸೇರಿಸುವ ಬಗ್ಗೆ ಹಾಗೂ ಪ್ರಗತಿ ಸಾಧಿಸಲು ಸಾಧ್ಯವಾಗದಿದ್ದರೆ ಏನು ಮಾಡುವವರ ಕುರಿತಾಗಿ ಚರ್ಚೆಯನ್ನು ಮಾಡಬಹುದು.

**ಕಾಲಾವಧಿ : 5 ಆಮಂತ್ರಿತ ಅತಿಥಿಗಳೊಂದಿಗೆ ಸಮಾರೋಪ ಸಮಾರಂಭ :**

ಎಲ್ಲ ಕಾಲಾವಧಿಗಳು ಮುಗಿದಾಗಿದ್ದರೆ, ಅತಿಥಿಗಳ ಮುಂದೆ ಪ್ರಸ್ತುತಪಡಿಸಲು ಈ ಕ್ರಿಯಾ ಯೋಜನೆಯು ಮೂಲಾಧಾರವಾಗುತ್ತದೆ. ಎಲ್ಲವನ್ನು ಪ್ರಸ್ತುತಪಡಿಸಲು ಸಮಯ ಸಾಲದೆ ಬರುತ್ತಿದ್ದರೆ ಒಂದೆರಡನ್ನು ಮಾತ್ರ ಮಂಡಿಸಬಹುದು. ಗುಂಪಿನ ಕಲಾಕೃತಿಗಳನ್ನು ಮತ್ತು ನಾಟಕಗಳನ್ನೂ ಪ್ರಸ್ತುತ ಪಡಿಸಬಹುದು. ಕಾರ್ಯಾಗಾರವು ಪೂರ್ತಿಯಾಗಿರದಿದ್ದರೆ, ಏನು ಬದಲಾವಣೆ ಮಾಡಬೇಕಿದೆ ಎಂಬುದರ ಮೇಲಿನ ಕೆಲಸವನ್ನೇ ಪ್ರಸ್ತುತ ಪಡಿಸಬಹುದು, ಅದರಂತೆ ಹಾಜರಿದ್ದ ಗೌರವಾನ್ವಿತರು ಈ ದಿಸೆಯಲ್ಲಿ ಏನು ಸಹಾಯ ಮಾಡಬಹುದೆಂಬದನ್ನು ಪ್ರಸ್ತುತ ಪಡಿಸಬಹುದು. ಗೌರವಾನ್ವಿತರು ಭಾಷಣ ಮಾಡುವ ಪೂರ್ವದಲ್ಲಿಯೇ ಅವರು ಎಲ್ಲ ಪ್ರಸ್ತುತಿಗಳನ್ನು ಗಮನಿಸುವಂತೆ ಮಾಡುವದು ಅತೀ ಮುಖ್ಯವಾದ ಸಂಗತಿ. ಇಲ್ಲವಾದರೆ ಸಮಾರಂಭವು ಸಬಲತೆ ಮತ್ತು ಸಮರ್ಥನೆಯ ಉದ್ದೇಶಗಳನ್ನು ಸಾರ್ಥಕಗೊಳಿಸಲಾರದು.

**ಜೋಗಿನಿ ಮಹಿಳೆಯರ ವ್ಯಕ್ತಿ ಚಿತ್ರಣ – ಮೆಹಬೂಬನಗರ ಪುಳಿಮನ್ನಿ :**

ಬಹಳ ವಯಸ್ಸಾದವಳಂತೆ ಕಂಡು ಬಂದರೂ ಪುಳಿಮನ್ನಿಯು 40 ರ ವಯಸ್ಸಿನಲ್ಲಿದ್ದಾಳೆ. ಅತ್ಯಂತ ಭೀಕರವಾದ ಸಂಕಟದಿಂದ ಅವಳು ಬದುಕಿ ಉಳಿದಿದ್ದಾಳೆ, ನನ್ನ ಒಪ್ಪಿಗೆಯಿಲ್ಲದೆ, ಅತ್ಯಂತ ಕಿರುವಯಸ್ಸಿನಲ್ಲಿ ನನ್ನಜ್ಜ ನನ್ನನ್ನು ಈ ರೀತಿ ಆಗುವಂತೆ ಮಾಡಿದ್ದಾನೆ. ನನ್ನನ್ನು ಒಬ್ಬನೇ ತಮ್ಮ ಮಾನಸಿಕವಾಗಿ ಹಾಗೂ ದೈಹಿಕವಾಗಿ ವಿಕಲಾಂಗವಿದ್ದ. ನನ್ನ ಅಜ್ಜ ಇದೊಂದು ದುರ್ದೈವದ ಸಂಗತಿ ಎಂದೂ, ಹಿರಿಯರು ಹೇಳಿದರೆಂದೂ ನನನ್ನು ದೂರ ಮಾಡಿ ಕುಟುಂಬದ ಹೆಸರನ್ನು ಉಳಿಸಲಿಕ್ಕೆಂದು ನನ್ನ ಕುಟುಂಬದಲ್ಲಿ ಬೇರೊಬ್ಬ ಪುರುಷನು ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡು ಹೋಗಲು ಇದ್ದಿರಲಿಲ್ಲವಾದ್ದರಿಂದ ನನ್ನ ತಾಯಿ – ತಂದೆಯರಿಗೆ ಒಬ್ಬರು ಜವಾಬ್ದಾರಿ ತೆಗೆದುಕೊಳ್ಳುವವರು ಬೇಕಾಗಿದ್ದರು.

ಅವಳು ಉಪಕ್ರಮಿಸಿದಾಗ 12 ವರ್ಷದವಳಿದ್ದಳು ಆಗ ಅವಳು ಋತುಮತಿಯಾದಳು. ಬೇರೆ ಜೋಗಿನಿಯರಂತೆ ಅವಳಿಗೂ ದೇವಿಯ ಜೊತೆ ಲಗ್ನ ಮಾಡಿದ ನಂತರ ಏನು ಆಗುವದೆಂಬ ಕಲ್ಪನೆಯೂ ಅವಳಿಗಿರಲಿಲ್ಲ, ಅವಳ ಬಳಿಗೆ ಬಂದ ಪ್ರಥಮ ಪುರುಷನೆಂದರೆ ಅವಳ ತಾಯಿಯ ತಮ್ಮ (ಸೋದರ ಮಾವ) ಅವನ ಹೆಸರು ಹೇಳಲು ಈಗಲೂ ಆಕೆ ನಡುಗುತ್ತಾಳೆ. ಅದೊಂದು ಭಯಂಕರ ಘಳಿಗೆ. ನಾನು ಅಳುತ್ತ ನನ್ನ ತಾಯಿಯ ಬಳಿಗೆ ಬಿಡಿ ಹೋದೆ, ಅವಳು ನನ್ನ ಕಣ್ಣೀರನ್ನೂ ಒರೆಸಲಿಲ್ಲ ಪ್ರತಿಯಾಗಿ ಇದನ್ನು ನೀನು ಒಪ್ಪಿಕೊಳ್ಳಲೇಬೇಕೆಂದಳು ಅವನು ನನಗೆ ಏನನ್ನೂ ಕೊಡಲಿಲ್ಲ, ದುಡ್ಡು ಕೊಡಲಿಲ್ಲ, ಏನೂ ಕೊಡಲಿಲ್ಲ ಅವನ ನಂತರ ಸಾಕಷ್ಟು ಜನ ಪುರುಷರು ನನ್ನ ಬಾಳಿನಲ್ಲಿ ಬಂದರು ನನಗೆ ಎಣಿಸಲಿಕ್ಕೆ ಬಾರದಷ್ಟು ನೆನಪಿನಲ್ಲಿ ಇಟ್ಟುಕೊಳ್ಳಲೂ ಆಗದಷ್ಟು ನನ್ನನ್ನು ದೇವರಿಗೆ ಕೊಟ್ಟಿದ್ದರಿಂದ, ನಾನೂ ಏನೂ ಮಾಡುವಂತಿರಲಿಲ್ಲ, ನಾನು ಯಾವೊಬ್ಬನ ಜೊತೆಯೂ ಜಗಳಾಡುವಂತಿರಬೇಕಿತ್ತು, ನನ್ನ ಮನೆಯ ಬಾಗಿಲನ್ನು ಮುಚ್ಚುವ ದಾರಿಯೇ ಇರಲಿಲ್ಲ, ನನ್ನ ಸೇವೆಗೆ ನನಗೆ ಏನೂ ದೊರೆಯಲಿಲ್ಲ, ಅದು ನನ್ನ ಕರ್ತವ್ಯವಾಗಿತ್ತು.

ಭೂಮಿ ಇಲ್ಲದ ಕುಟುಂಬಗಳ ಎಲ್ಲ ಮಹಿಳೆಯರಂತೆ ಜೀವನವು ಎಂದೂ ಮುಗಿಯದ ಕೆಲಸದ ಬಂಡಿ. ಆದರೆ ಗಂಡನಿಲ್ಲದ ಬದುಕು ಎರಡುಪಟ್ಟು ಹೊರೆ. ನಾನು ಯಾವಾಗಲೂ ಕಷ್ಟಪಟ್ಟು ದುಡಿಯಬೇಕಾಗಿತ್ತು. ನಾವು ಜೋಗಿನಿಯರು ಎಲ್ಲರಂತೆ ಮನೆಗೆಲಸಗಳನ್ನು ಮಾಡಬೇಕು. ಮಕ್ಕಳನ್ನು ಹೆರಬೇಕು. ಅವುಗಳ ಪಾಲನೆ – ಪೋಷಣೆ ಮಾಡಬೇಕು, ಆದರೆ ನಮಗೆ ಗಂಡನಿಲ್ಲದೇ ಇರುವದರಿಂದ, ಮನೆಯ ಹೊರಗಿನ ಕೆಲಸಗಳನ್ನೂ ನಾವೇ ಮಾಡಬೇಕು. ನಮಗೆ ಕೂಲಿಯಾಗಿ ಅತ್ಯಂತ ಕಡಿಮೆ ಹಣವನ್ನು ನೀಡುತ್ತಾರೆ, ಅಲ್ಲದೆ ನಾವು ಸಾಕಷ್ಟು ಅವಮಾನಗಳನ್ನು ಸಹಿಸಬೇಕು. ನಾನು ನನ್ನ ತಾಯಿ, ನನ್ನ ಅನಾರೋಗ್ಯ ಪೀಡಿತ ತಮ್ಮ ಮತ್ತು ನನ್ನ ಮಗಳನ್ನು ಎಲ್ಲರನ್ನು ನಾನೇ ನೋಡಿಕೊಳ್ಳಬೇಕು.

ಅವಳು ಸಾಕಷ್ಟು ಕಷ್ಟಗಳನ್ನು ಅನುಭವಿಸಿದ್ದರೂ ಪುಳಿಮನ್ನಿಯು ಒಳ್ಳೆ ಅನುಭವಿ, ಗಟ್ಟಿ – ಮನಸ್ಸಿನ ಹಾಗೂ ತನ್ನ ಒಬ್ಬಳೇ ಮಗಳ ಬಗ್ಗೆ ಬಹಳ ಮಹತ್ವಾಕಾಂಕ್ಷೆಯನ್ನು ಹೊಂದಿದ ಮಹಿಳೆ. ಎಲ್ಲಕ್ಕೂ ಮಿಗಿಲಾಗಿ ನಾನು ನನ್ನ ಮಗಳನ್ನು ಜೋಗಿನಿಯಾಗಿ ಮಾಡದೆ, ನಾನೇ ಭಿಕ್ಷೆ ಬೇಡಿ. ನನ್ನ ಮಗಳ ಸಲುವಾಗಿ ಪೂಜೆ – ಪ್ರಾರ್ಥನೆ ಸಲ್ಲಿಸಿದೆ. ಸ್ವಲ್ಪ ದುಡ್ಡನ್ನು ವರದಕ್ಷಿಣೆಗಾಗಿ ಉಳಿಸಲು ಸಾಧ್ಯ ಮಾಡಿದೆ, ಅವಳಿಗೆ ಗಂಡನನ್ನು ಹುಡುಕಿದ ಈಗ ಅವಳಿಗೆ ಎರಡು ಮಕ್ಕಳು ಅವಳು ಕುಟುಂಬ ಜೀವನವನ್ನು ಆನಂದದಿಂದ ಅನುಭವಿಸುತ್ತಿದ್ದಾಳೆ. ನಾನು ಅವಳನ್ನು ಯಾವಾಗಲಾದರೊಮ್ಮೆ ಕಾಣುತ್ತೇನೆ, ಕೆಲವೊಂದು ಸಲ ಅವಳೇ ಸ್ವಲ್ಪ ದುಡ್ಡನ್ನು ಕಳಿಸುತ್ತಾಳೆ.

ದೇವರಿಗೆ ಅರ್ಪಣೆ ಆಗುವದರಿಂದ ಏನಾದರೂ ಲಾಭ ಇದೆಯೇ? 'ಜೋಗಿನಿಯಾಗಿ ನನಗೆ ಒಳ್ಳೆಯದು ಯಾವಾಗಲೂ ಆಗಲಿಲ್ಲ' ನನ್ನ ಆಕ್ರೋಶ ಕೆಟ್ಟಿತು, ನನ್ನ ಮನೆ ಕೆಟ್ಟಿತು. ನನ್ನ ಸಂಬಂಧಗಳು ಕೆಟ್ಟವು. ನನ್ನ ಇಡೀ ಜೀವನವೇ ಕೆಟ್ಟು ಹೋಯಿತು. ಆದರೆ ನನಗೆ ಏನೇ ಆದರೂ ನನ್ನ ತಾಯಿಯನ್ನು ಯಾವಾಗಲೂ ಬೈಯ್ಯಲಿಲ್ಲ. ಇದರಲ್ಲಿ ಅವಳಿಗೆ ಏನೂ ಹೇಳುವುದಿರಲಿಲ್ಲ. ಇದೆಲ್ಲ ನನ್ನ ಅಜ್ಜನ ಜವಾಬ್ದಾರಿಯಾಗಿತ್ತು – ಅವನು ತಪ್ಪು ಮಾಡಿದ.

ಚಿನ್ನಮ್ಮ (25) ಇವಳಿಗೆ ಒಂದು ವರ್ಷದ ಮಗಳು ಅನುಷಾ ಇದ್ದಾಳೆ

ಚಿನ್ನಮ್ಮ ಮೂಗಿ, ಅಲ್ಲದೆ ಕಿವುಡೂ ಸಹ ಮತ್ತು ಸರಿಯಾಗಿ ಮಾತನಾಡಲು ಬರುವದಿಲ್ಲ. ಈ ಕಾರಣಗಳಿಗಾಗಿ ಅವಳನ್ನು ಅವಳ ಕುಟುಂಬದ ಹಿರಿಯರು ಜೋಗಿನಿಯಾಗಿ ಮಾಡಿದರು. ಅವಳನ್ನು ಅವಳ ತಂಗಿಯ ಗಂಡನಿಗೆ ಮದುವೆ ಮಾಡಿ ಕೊಡಲಾಗಿತ್ತು. ಆದರೆ ಅವನ್ನು ಬಿಟ್ಟಿದ್ದರಿಂದ ಅವಳೀಗ ಅವಳ ತಂದೆ - ತಾಯಿಗಳ ಜೊತೆಯಲ್ಲಿಯೇ ಬದುಕುತ್ತಿದ್ದಾಳೆ. ಆದುದರಿಂದ ಅವಳು ಲೈಂಗಿಕವಾಗಿ ಎಲ್ಲರಿಗೂ ಲಭ್ಯವಾಗಬೇಕಾಯಿತು. ಅವಳಿಗೆ ಒಬ್ಬನಿಂದ ಒಂದು ಮಗುವಾಯಿತು. ಆ ಪುರುಷ ಅವಳ ಸೇವೆಯನ್ನು ಬೇಡುತ್ತಾನೆ.

ಜೋಗಿನಿ ಹಾಡು

ನಾವು ಭಾರತೀಯರು ನಾವು ಕಸದ ಗುಂಡಿಯಲ್ಲಿ ನಾಯಿಗಳಂತೆ ಯಾರೂ ನಮಗೆ ಹೆಸರನ್ನು ನೀಡಲಾರರು, ನಮ್ಮನ್ನವರು ಅಪಹಾಸ್ಯ ಮಾಡುವರು, ನಾವು ಕೆಟ್ಟವರು, ಉಪಯೋಗವಿಲ್ಲದವರೆಂದು ನಮಗೆ ಹೇಳುವರು ನಮಗೆ ತಂದೆ ಇಲ್ಲ, ನಮ್ಮ ಕಾಳಜಿ ತೆಗೆದುಕೊಳ್ಳುವಂತವನು, ಅಂತಹನು ಮಕ್ಕಳನ್ನು ಪಡೆಯಲು ಅರ್ಹನಲ್ಲ, ಆದರೂ ನಾವು ಭಾರತೀಯರಾಗಿದ್ದೇವೆ. ನಾನು ಹುಟ್ಟಿದಾಗಲೇ, ಸತ್ತಿದ್ದೇನೆಂದು ಅನಿಸುತ್ತದೆ, ಗಂಡು ಮಗುವಿಗಾಗಿ ನೀವು ನಮ್ಮ ಬದುಕುಗಳ ತ್ಯಾಗ ಬಯಸುತ್ತೀರಿ.

ಲಕ್ಷ್ಮೀ (20)

ಅವಳ ತಾಯಿ ತುಂಬ ವಯಸ್ಸಿನವಳು, ತನ್ನನ್ನು ಯಾರೂ ನೋಡಿಕೊಳ್ಳುವವರಿಲ್ಲವೆಂದು ತನ್ನನ್ನು ಜೋಗಿನಿಯಾಗಿ ಮಾಡಿದಳು. ತಾಯಿಯ ಅವಳನ್ನು ಒಬ್ಬ ಗಂಡನಿಗೆ ಒಪ್ಪಿಸಿದಳು, ಆದರೆ ಆತ ನಂತರ ತೀರಿ ಹೋದ. ಕೆಲಸದ ಅವಶ್ಯಕತೆಯ ಹತಾಸೆಯಿಂದ ಅವಳು ಕಟ್ಟಡ ಕಾಮಗಾರಿ ಕೂಲಿಯಾಗಿ ಹೈದ್ರಾಬಾದಕ್ಕೆ ಹೋದಳು. ಅಲ್ಲಿದ್ದಾಗಲೇ ಅವಳು ಗರ್ಭಿಣಿಯಾದಳು. ಅವಳು ಕಾಮಗಾರಿ ಕೂಲಿ ಕೆಲಸ ಬಿಟ್ಟು ಊರಿಗೆ ಬಂದಳು. 3 ತಿಂಗಳ ವರೆಗೆ ಅವಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾದಳು. ತನ್ನ ಮಗು ಹುಟ್ಟಿದ ಮೇಲೆ, ಮಗುವನ್ನು ತನ್ನ ಜೊತೆಯಲ್ಲಿಯೇ ತೆಗೆದುಕೊಂಡು ಹೋಗಬೇಕಾಯಿತು. ಲಕ್ಷ್ಮೀಯು ಈ ಜೋಗಿನಿ ಪದ್ಧತಿಯ ಬಗೆಗಿನ ನಂಬಿಕೆಗಳನ್ನು ಬಿಟ್ಟುಕೊಟ್ಟಿಲ್ಲ. ಅವಳ ಮಗಳನ್ನು ಯಾರೂ ನೋಡಿಕೊಳ್ಳದೇ ಹೋದ ಪಕ್ಷದಲ್ಲಿ ಆ ಮಗುವನ್ನು ಜೋಗಿನಿಯಾಗಿ ಮಾಡುವುದಾಗಿ ಹೇಳುತ್ತಾಳೆ.

ಯಶೋದಾ (30)

'ಜೋಗಿನಿಯರಲ್ಲಿ ಎರಡು ಪ್ರಕಾರ ಒಂದು ಪ್ರಕಾರದಲ್ಲಿ, ಮಹಿಳೆಯು ಸಾರ್ವಜನಿಕ ಸೊತ್ತಾಗಿರುತ್ತಾಳೆ. ಇನ್ನೊಂದರಲ್ಲಿ, ನನಗಾಗಿರುವಂತೆ,ಅವಳು ಒಬ್ಬಂಟಿಗಳಾಗಿರುತ್ತಾಳೆ. ಯಶೋಧಳನ್ನು ಎರಡನೇ ಹೆಂಡತಿಯಾಗಿ ತೆಗೆದುಕೊಳ್ಳಲ್ಪಟ್ಟವಳಾಗಿದ್ದಳು ಮತ್ತು ಅವಳಿಗೆ ಎರಡು ಮಕ್ಕಳು 6 ಮತ್ತು 4 ವಯಸ್ಸಿನವರು. ಆ ವ್ಯಕ್ತಿಯ ಹೆಂಡತಿ ಅವನನ್ನು ಮರಳಿ ಪಡೆದುಕೊಂಡಳು. ಅವನು ಇನ್ನೊಂದಿಗೂ ಅವಳ ಸಮೀಪಕ್ಕೆ ಸುಳಿಯಲಾರ. ನನ್ನ ಮಕ್ಕಳು ತಮ್ಮ ತಂದೆಯ ಬಗ್ಗೆ ಕೇಳಿದರೆ, ಆತ ಸತ್ತು ಹೋಗಿದ್ದಾನೆಂದು ಹೇಳುವೆ'

ಯಸೋಧಳಿಗೆ ಇಬ್ಬರು ಸಹೋದರಿಯರು ಮತ್ತು ಒಬ್ಬ ಸಹೋದರ, ಆದರೆ ಇವರಾರೂ ಅವಳಿಗೆ ಏನೂ ಸಹಾಯ ಮಾಡುವದಿಲ್ಲ. ಅವಳು ಶಾಲೆಗೆ ಎಂದು ಹೋಗಲಿಲ್ಲ ಮತ್ತು ಓದಲು ಮತ್ತು ಬರೆಯಲು ಅವಳಿಗೆ ಬರುವದಿಲ್ಲ. ಅವಳು ಕೃಷಿ ಕೂಲಿಯಾಗಿ ಕೆಲಸಕ್ಕೆ ಹೋಗುತ್ತಾಳೆ. ಮತ್ತು ಅವಳೆಂದೂ ವಲಸೆ ಹೋಗಲಾರೆನೆಂದು ನಿರ್ಧರಿಸಿದ್ದಾಳೆ. ಅವಳು ದಿನಕ್ಕೆ ಕೇವಲ ರೂ. 20/- ಮಾತ್ರ ದುಡಿಯುತ್ತಾಳೆ. ಮತ್ತು ಅವಳು ಕೃಷಿ ಹೊರಗೆಲಸಗಳಿಗೆ ಹೋದಾಗಲೆಲ್ಲ ಅವಮಾನಿತಳಾಗುತ್ತಾಳೆ.

'ಜೋಗಿನಿ ಪದ್ಧತಿಯು ಬಹಳ ಕೆಟ್ಟದಿದ್ದು ಯಾರೂ ಅದಕ್ಕೆ ಒಳಗಾಗಬಾರದು. ಇದು ಅತ್ಯಂತ ಕಷ್ಟದಾಯಕ ಮತ್ತು ಅತ್ಯಂತ ಕಡಿಮೆ ಸುಖ ಕೊಡುವ ಭಯಂಕರ ಜೀವನ. 20 ರೂ. ಗಳಲ್ಲಿಯೇ ನಿಮ್ಮ ಮಕ್ಕಳನ್ನು ಅದೇಗೆ ಸಾಕಲಾಗುತ್ತದೆ? ಆದರೆ ಯಶೋಧಾ ಅದರ ವಿರುದ್ಧ ಕ್ರಿಯಾಶೀಲಳಾಗಿಲ್ಲ, ಕೆಲವು ಬೇರೆಯವರಂತೆ. ಅವಳು ನಂಬುವುದೇನೆಂದರೆ ಜೋಗಿನಿಯನ್ನು ಮಾಡುವದು ಕುಟುಂಬದ ವ್ಯವಹಾರ ಆದ್ದರಿಂದ ಅದರಲ್ಲಿ ಮೂಗು ತೂರಿಸಲು ಅವಳಿ ಇಷ್ಟವಿಲ್ಲ.'

## ನಾಗಮ್ಮ

ನಾಗಮ್ಮ 30 ವಯಸ್ಸಿನ, ಒಳ್ಳೆಯ ವೇಷ - ಭೂಷಣದ ಮುಂದಾಳತ್ವ ಹೊಂದಿದ ಮಹಿಳೆ, ಅವಳು ಅತ್ಯಂತ ಕಠಿಣ ಪ್ರಸಂಗಗಳಲ್ಲೂ ಮೇಲೆ ಬಂದವಳು. ಅವಳು ಮೆಹಬೂಬನಗರ ಜಿಲ್ಲೆಯ ಮದ್ದೂರು ಎಂಬ ಸಣ್ಣ ಗ್ರಾಮದವಳು. ಅವಳ ಕುಟುಂಬದವರು ಭೂ ರಹಿತ ಕೃಷಿ ಕೂಲಿಕಾರರು. ಅವಳಿಗೆ 4 ಸಹೋದರಿಯನ್ನು ಮತ್ತು ಒಬ್ಬ ಸಹೋದರ, ಮತ್ತು ಅವಳ ತಂದೆ ಕುಡಕ ಅವರಿಗೆ ಕುಟುಂಬಕ್ಕೆ ಸಾಲುವಷ್ಟು ದುಡ್ಡಿಲ್ಲದಿದ್ದರಿಂದ ಎಲ್ಲರಿಗೂ ಅನ್ನ ಒದಗಿಸಲು ಅವಳ ತಾಯಿ ಕೃಷಿ ಕೂಲಿಗಾರಳಾಗಿ ಕೆಲಸಕ್ಕೆ ಹೋಗಬೇಕಾಯಿತು. ನಮಗೆ ದಿವಸಕ್ಕೆ ಯಾವತ್ತೂ ಒಂದು ಊಟಕ್ಕಿಂತ ಹೆಚ್ಚಿಗಿರಲಿಲ್ಲ, ಒಮ್ಮೊಮ್ಮೆ ಸಣ್ಣವನು ಕುಟುಂಬದೊಳಗೆ ನಾಗಮ್ಮ 5ನೇ ತರಗತಿಯ ವರೆಗೆ ಶಾಲೆಗ ಹೋದಳು, ಆದರೆ ಅವಳ 9ನೇ ವಯಸ್ಸಿಗೆ ಅವಳನ್ನು ಶಾಲೆಯಿಂದ ಬಿಡಿಸಲಾಯಿತು. ತಾಯಿಯ ಜೊತೆ ಮುಂಬಯಿಗೆ ಗುತ್ತಿಗೆಯ ಮೇಲೆ ಶಾಲೆ ಬಿಡಿಸಿ ಕರೆದುಕೊಂಡು ಹೋಗಲಾಯಿತು. ಗುತ್ತಿಗೆದಾರರು ಒಂದು ಪ್ರತಿ ವರುಷ ಕೂಲಿಕಾರರ ಗುಂಪಿನೊಂದಿಗೆ ಸೀಜನ್ ಸಲುವಾಗಿ ಸಹಿ ಮಾಡಿಸಿಕೊಂಡು ಹೋಗುತ್ತಿದ್ದರು. ನಾವು ನೂರು ಜನರ ಒಂದು ಗುಂಪಿನಲ್ಲಿದ್ದೇವು, ನಮಗೆ ಕಾಲುವೆ ಹಡ್ಡಲು ದಿನಕ್ಕೆ ಒಬ್ಬರಿಗೆ 12 ರೂ. ಗಳನ್ನು ಕೂಲಿ ಕೊಡುತ್ತಿದ್ದರು. ನಮಗೆ ಉಚಿತವಾಗಿ ಆಹಾರ ಧಾನ್ಯವನ್ನು ಕೊಡುತ್ತಿದ್ದರು. ನಾವೇ ಆಹಾರವನ್ನು ಬೇಯಿಸಿಕೊಳ್ಳುತ್ತಿದ್ದೇವು. ನಾವು 9 ತಿಂಗಳು ಹೊರಗಿರುತ್ತಿದ್ದೇವೆ. ಆ ನಂತರ ಮರಳುತ್ತಿದ್ದೇವು. ನಮಗೆ ದುಡ್ಡನ್ನು ಅವರು ಕೊಟ್ಟಾಗ ಅದರಲ್ಲಿ ಹೆಚ್ಚಿನ ಭಾಗವನ್ನು ನಮ್ಮ ತಂದೆಯೇ ತೆಗೆದುಕೊಂಡು ಕುಡಿತಕ್ಕೆ ಖರ್ಚು ಮಾಡುತ್ತಿದ್ದ. ನಾಗಮ್ಮ ಮೂರು ವರುಷ ಒಂದೇ ಸವನೆ ಗುತ್ತಿಗೆಯ ಮೇಲೆ ತನ್ನ ತಾಯಿಯೊಂದಿಗೆ ಹೋಗಿದ್ದಳು.

ನಾಗಮ್ಮ 10 ವರ್ಷವಿದ್ದಾಗ ಅವಳ ಹಿರಿಯಕ್ಕ ಮದುವೆಯಾದಳು. ಉಳಿದ ಸಹೋದರಿಯರಲ್ಲಿ ಒಬ್ಬಳು ತೀರಿ ಹೋದಳು, ನಮ್ಮ ಕುಟುಂಬ ತೊಂದರೆಗಿಡಾಯಿತು. ಆದ್ದರಿಂದ ನಮ್ಮ ತಾಯಿ ತಂದೆಯರು ನನ್ನನ್ನು ಜೋಗಿನಿಯಾಗಿ ಮಾಡುವದಕ್ಕೆ ವಿಚಾರ ಮಾಡಿದರು, ನಾನು ಅದಕ್ಕೆ ಅರ್ಗ ವಯಸ್ಸಿನಲ್ಲಿದ್ದೇ. ಬೇರೆಯವರು ನನ್ನನ್ನು ಮದುವೆಗೆ ಕೇಳಿ ಬರುವ ಮೊದಲೇ ತಮ್ಮ ನಿರ್ಧಾರವನ್ನು ಕೂಡಲೇ ಕೈಗೊಂಡರು - ಆ ಸಮಯದಲ್ಲಿ 9 ಅಥವಾ 10 ನೇ ವಯಸ್ಸಿಗೆ ಋತುಮತಿಯಾಗಲಿ ಬಿಡಲಿ, ಮದುವೆ ಮಾಡುವದು ಸಾಮಾನ್ಯವಾಗಿತ್ತು, ಕುಟುಂಬಕ್ಕೆ ಹತ್ತಿರವಿದ್ದ ಓರ್ವ ವ್ಯಕ್ತಿ ಅವಳ ಬಗ್ಗೆ ಆಸಕ್ತಿ ತೋರಿದ್ದ, ಅದನ್ನು ಅವಳ ತಾಯಿ - ತಂದೆಯರು ಒಪ್ಪಿಕೊಂಡಿದ್ದು ಅವನ ಖರ್ಚಿನಲ್ಲಿಯೇ ಇವಳನ್ನು ಜೋಗಿನಿ ಮಾಡಿದರು.

12 ವರುಷಗಳಾಗುವಷ್ಟರಲ್ಲಿ ಅವಳು ಋತುಮತಿಯಾದಳು. 6 ತಿಂಗಳ ವರೆಗೆ ಅವಳು ತನ್ನ ಮಾಲಿಕನೊಂದಿಗೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿದ್ದಳು. ಮತ್ತು ಗರ್ಭಿಣಿಯಾದಳು. ಆದರೆ ಆತ ಅದಾಗಲೇ ಮದುವೆಯಾಗಿದ್ದ, ನನಗೆ ಹೆಣ್ಣು ಮಗುವಾದಾಗ ಅವಳಿಗೆ ತೀವ್ರವಾದ ಕಾಯಿಲೆ. ಅವಳ ಶ್ವಾಸ ಕೋಶಗಳು ಬಹಳೇ ಅಶಕ್ತವಾಗಿದ್ದರಿಂದ ಅವಳು ಗಂಟಲು ನೋವಿಗೆ ತುತ್ತಾದಳು (ಡಿಫ್ತೀರಿಯಾ) ನಂತರದ ದಿನಗಳಲ್ಲಿ ಮಗುವಿನ ತಂದೆ ವೈವಾಹಿಕ ಜೀವನದ ಹೊರಗಿನ ಸಾಕಷ್ಟು ಸಂಬಂಧಗಳನ್ನು ಇಟ್ಟುಕೊಂಡರೂ ನಾಗಮ್ಮ ತನ್ನ ಮಗುವಿನ ಕಾಯಿಲೆಗೆ ಅವಳ ಲೈಂಗಿಕ ರೋಗಗಳ ಸೋಂಕೇ ಕಾರಣವೆಂದು ಬಲವಾಗಿ ನಂಬಿದ್ದಾಳೆ. 'ನಾನು ಮಗುವಿನ ಕಾಯಿಲೆ ನಿವಾರಣೆಗೆ ಆಸ್ಪತ್ರೆಯ ಖರ್ಚಿಗಾಗಿ ದುಡ್ಡು ಕೊಡಲು ಹೇಳಿ ಕಳಿಸಿದರೂ ಮಗುವಿನ ತಂದೆ ಮಗುವನ್ನೇ ನಿರಾಕರಿಸಿ, ನಾನು ಬೇರೆಯವರೊಂದಿಗೆ ಹಾಸಿಗೆಯಲ್ಲಿದ್ದೆ ಎಂದು ಕಾರಣ ಹೇಳಿದ ಒಂದು ತಿಂಗಳ ನಂತರ ಆ ಮಗು ತೀರಿ ಹೋಯಿತು.'

ಇದು ಮೊದಲನೇ ದುಃಖದ ಘಟನೆ. ಕುಟುಂಬದಲ್ಲಿನ ನಾಲ್ಕು ಸಾವುಗಳು, ಅವಳ ತಾಯಿ, ತಂದೆ ಸಹೋದರ ಮತ್ತು ಓರ್ವ ಸಹೋದರಿ ಒಂದಾದ ಮೇಲೊಂದು ಕಡಿಮೆ ಅವಧಿಯಲ್ಲಿ ಸಂಭವಿಸಿದವು. ಆದ್ದರಿಂದ ನಾನು ನನ್ನ ಕಿರಿಯ ಸಹೋದರಿಯೊಂದಿಗೆ ಒಬ್ಬಲೇ ಉಳಿದುಕೊಂಡೆ, ನಾವಿಬ್ಬರು ಕೂಡಿ ಇದ್ದು ನಮ್ಮಲ್ಲಿ ಯಾರೊಬ್ಬರು ಮದುವೆಯಾಗಿರಲಿಲ್ಲ, ನಾವು ಯಾವಾಗಲೂ ಕೂಡಿಯೇ ಕೃಷಿ ಕೂಲಿಯಾಳಾಗಿ ಕೆಲಸ ಮಾಡುತ್ತಿದ್ದೇವು. ನಮ್ಮನ್ನು ನಾವೇ ನೋಡಿಕೊಳ್ಳುತ್ತಿದ್ದೇವು.

ಒಂದು ಸುದೈವದ ಸಂಗತಿ ಎಂದರೆ ನಾಗಮ್ಮಗಳ ಕರುಣಾಳು ಚಿಕ್ಕಮ್ಮ ಅವಳ ತಾಯಿಯ ಸಹೋದರಿ ಶಿಕ್ಷಿತ ಸುಸಂಸ್ಕೃತ ಮಹಿಳೆ. ಅವಳ ಹತ್ತಿರ ದುಡ್ಡು ಇದೆ. ಅವಳು ನಾಗಮ್ಮ ಮತ್ತು ಅವಳ ಸಹೋದರಿಗೆ ಸೀರೆ ಹಾಗೂ ಇತರ ಅವಶ್ಯಕ ಸಾಮಾನುಗಳನ್ನು ಸಹಾಯವನ್ನು ಒದಗಿಸಿದ್ದಾಳೆ. ಅವಳ ಚಿಕ್ಕಮ್ಮನ ಉದಾಹರಣೆ ನಾಗಮ್ಮನಿಗೆ ತಾನೂ ಶಿಕ್ಷಣವನ್ನು ಸುಧಾರಿಸಿಕೊಳ್ಳಬೇಕೆಂದು ಉತ್ತೇಜನವಾಯಿತು. 10 ನೇ ತರಗತಿಯಿಂದ ಪದವಿ ಶಿಕ್ಷಣವನ್ನು APMSS ನ ಕಾರ್ಯಕ್ರಮಗಳ ಸಹಾಯದಿಂದ ಈಗ ಪಡೆದುಕೊಂಡಿದ್ದಾಳೆ. ಈಗ ಅವಳು ಆತ್ಮ - ವಿಶ್ವಾಸವನ್ನು ಪಡೆದುಕೊಂಡು ಸಶಕ್ತಳಾಗಿದ್ದಾಳೆ ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಸಂಪಾದಿಸಿದ್ದಾಳೆ.

ನಾಗಮ್ಮ (APMSS ಚಳುವಳಿಯಾದ) ಮಹಿಳಾ ಸಂಘದಲ್ಲಿ ಬಹಳ ಕ್ರಿಯಾಶೀಲವಾಗಿದ್ದಾಳೆ. ಸ್ವ - ಸಹಾಯ ಸಂಘಗಳನ್ನು ಸ್ಥಾಪಿಸುವದು ಮತ್ತು ಬೆಳೆಸುವದರ ಪ್ರಾರಂಭದಲ್ಲಿ ಮಹಿಳೆಯರನ್ನು ಅಭ್ಯಾಸ ಇರುವುದಿಲ್ಲ ಇಂತಹ ಚಟುವಟಿಕೆಗಳಲ್ಲಿ

ತೊಡಗಿಸುವುದು ಬಹಳ ಕಠಿಣ, ಅವರು ಸಭೆ ಸೇರುವುದು, ಕೂಡಿ ಕುಳಿತು ಮಾತನಾಡುವುದು ಅವರಿಗೆ ಅಭ್ಯಾಸ ಇರುವುದಿಲ್ಲ. ಜೋಗಿನಿಯರೆಂದು ಹೇಳಿಕೊಳ್ಳ ಬಯಸದಿರುವದಿಲ್ಲ. ಅವರು ಜೀವನದ ಆ ಭಾಗವನ್ನು ಮಾತನಾಡಲು ಇಷ್ಟ ಪಡುವುದಿಲ್ಲ ಹಾಗೂ ಬಹಳ ಸಮಯ ತೆಗೆದುಕೊಳ್ಳುವರು, ಅವರು ಬೇರೆ ವಿಷಯಗಳನ್ನು ಮಾತನಾಡುವರು. ಅವರು ಈ ವಿಷಯದ ಬಗ್ಗೆ ವಿಚಾರ ಮಾಡಲು ಸಹಾಯ ಮಾಡದೇ ಹೋದರೆ ಮಾಡುವುದೇ ಇಲ್ಲ ಹಾಗೂ ಆದರಿಂದ ತಾವೇನು ಕಳೆದುಕೊಂಡಿದ್ದೇವೆ ಎಂಬುದರ ಬಗ್ಗೆ ಅರಿವಿಲ್ಲ. ಅವರಿಗೆ ಸ್ವಯಂ ಜಾಗೃತಿ ಮತ್ತು ಗೌರವದ ಕೊರತೆಯಿದೆ.

ನಾಗಮ್ಮಳ ದೃಷ್ಠಿಯಲ್ಲಿ ಜೋಗಿನಿ ಆಚರಣೆಯನ್ನು ನಿರ್ಮೂಲನೆಗೊಳಿಸುವ ಒಂದೇ ದಾರಿ ಎಂದರೆ ಹೆಣ್ಣು ಮಕ್ಕಳನ್ನು ಪಾಲಕರು ದೇವತೆಗೆ ಮದುವೆ ಮಾಡಿ ಕೊಡದೇ ಅವಳನ್ನು ಸಾಮಾನ್ಯ ರೀತಿಯಲ್ಲಿ ಮದುವೆ ಮಾಡಿ ಕೊಡುವದು. ಸಮೀಪದಲ್ಲಿಯೇ ಇದ್ದು ತಾಯಿಯ ಕುಟುಂಬಕ್ಕೆ ಸಾಧ್ಯವಾದ ಮಟ್ಟಿಗೆ ಸಹಾಯ ಮಾಡುವುದು ಮದುವೆ ಅಂದರೆ ಅದರರ್ಥ ಹೆಣ್ಣುಮಗಳನ್ನು ಖಾಯಂ ಆಗಿ ಕಳೆದುಕೊಳ್ಳುವದು ಎಂದರ್ಥವಲ್ಲ.

ಜೋಗಿನಿ ಪದ್ಧತಿಯ ಕಡಿಮೆಯಾಗುತ್ತಿದೆ ಎಂಬುದನ್ನು ನಾಗಮ್ಮ ಒಪ್ಪಿಕೊಳ್ಳುತ್ತಾಳಾದರೂ, ಆದರೆ ಅದು ಪೂರ್ಣವಾಗಿ ಸತ್ತಿಲ್ಲವೆಂಬ ತಿಳುವಳಿಕೆ ಅವಳಲ್ಲಿದೆ. ಓರ್ವ ತರುಣಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದವಳೊಬ್ಬಳು ತೀರ ಇತ್ತೀಚೆಗೆ ಜೋಗಿನಿಯಾಗಿ ಅರ್ಪಿತಳಾಗಿದ್ದವಳು ಎಂಬುದನ್ನು ನಾಗಮ್ಮ ಎತ್ತಿ ತೋರಿಸುತ್ತಾಳೆ. ಕಾಯ್ದೆ ಇದೆ ಆದರೆ ಅದನ್ನು ಸರಿಯಾಗಿ ಜಾರಿಗೊಳಿಸಿಲ್ಲ. ಸರಕಾರೇತರ ಸಂಸ್ಥೆಗಳು ಮತ್ತು ಮಹಿಳಾ ಸಂಘಗಳು ಪ್ರಯತ್ನಿಸುತ್ತಿದ್ದರೂ ಸಹ ಪದ್ಧತಿಯು ಗುಪ್ತವಾಗಿ ನಡೆದುಕೊಂಡೇ ಬರುತ್ತಿದೆ. ನಮ್ಮ ಕಾಯ್ದೆ ರೂಪಿಸುವವರೇ ಕಾಯ್ದೆಯನ್ನು ಮುರಿಯುವವರಾಗಿದ್ದಾರೆ. ಧ್ಯೇಯ್ಯ ಧೋರಣೆಗಳನ್ನು ರೂಪಿಸುವವರಲ್ಲಿಯೇ ಕೆಲವರು ಜೋಗಿನಿ ಪದ್ಧತಿ ಮುಂದುವರಿಯುವ ಬಗ್ಗೆ ಸಂತೋಷದಿಂದ ಇದ್ದಾರೆ - ಅವರು ಆನಂದಿಸುವ ಸೇವೆಯನ್ನು ಇದು ಒದಗಿಸುತ್ತದೆ. ನಮ್ಮ ಜಾಗೃತಿ ಪ್ರಚಾರಗಳಿದ್ದಾಗಲೂ ಸಹ, ಇನ್ನೂ ಕೆಲವೊಂದು ದೂರದ ಪ್ರದೇಶಗಳನ್ನು ನಾವು ತಲುಪಿಲ್ಲ. ನನಗೆ ಖಾತ್ರಿ ಇದೆ ಏನೆಂದರೆ ಸರಿಯಾದ ಕಾರ್ಯಕ್ರಮಗಳು ಇಲ್ಲದೆ ಸರಿಯಾಗಿ ಕಾಯ್ದೆಗಳನ್ನು ಜಾರಿಗೊಳಿಸದೇ ನಿಶ್ಚಿತವಾಗಿಯೂ ಈ ಹಿಂದಿನಂತೆ ಇದು ಮುಂದುವರಿಯುತ್ತದೆ.

ಆಶಮ್ಮ

ಮೆಹಬೂಬನಗರ ಜಿಲ್ಲೆಯ ಕರಣಿ ಎಂಬ ಹೆಸರಿನ ಸಣ್ಣ ಹಳ್ಳಿಯಲ್ಲಿ 40 ವರುಷಗಳ ಹಿಂದೆ ಆಶಮ್ಮ ಜನ್ಮ ತಳೆದಳು. ಅವಳ ತಾಯಿ ತಂದೆಯರಾದ ಲಕ್ಷ್ಮಣ ಮತ್ತು ಲಿಂಗಮ್ಮ ಅವರು ಕೃಷಿ ಕೂಲಿಕಾರರಾಗಿದ್ದರು. ಅವರಿಗೆ ಗಂಡು ಮಗುವಿರಲಿಲ್ಲ, ಆದ್ದರಿಂದ ಅವಳ ಅಜ್ಜನ ಪ್ರಸ್ತಾವನೆಯಾಗಿ ಇವಳನ್ನು ದೇವತೆಗೆ ಅರ್ಪಿಸಿ ಅವಳನ್ನು ತಮ್ಮ ಜೀವನ ನಿರ್ವಹಣೆಗಾಗಿ ಮನೆಯಲ್ಲಿ ಇಟ್ಟುಕೊಳ್ಳುವದಕ್ಕೆ ಒಪ್ಪಿದರು.

ಅವಳ 9ನೇ ವಯಸ್ಸಿಗೆ ಅವಳನ್ನು ಗ್ರಾಮದೇವತೆಗೆ ಮದುವೆ ಮಾಡಿದರು. ಈ ಕ್ಷಣದಿಂದ ನಾನು ಗೌರವದಿಂದ ಬದುಕಲಿಲ್ಲ. ನಾನು ಕರಣಿ ಗ್ರಾಮದ ಎಲ್ಲ ಪುರುಷರಿಗೆ ಲಭ್ಯವಾದೆ. ಅವರು ನನ್ನನ್ನು ಲೈಂಗಿಕ ಅನುಕೂಲತೆಗೆ ಕೇಳುತ್ತಿದ್ದರು, ನಾನು ಜೋಗಿನಿಯಾಗಿ ಅವರನ್ನು ತೃಪ್ತಿಪಡಿಸಬೇಕಾಗಿತ್ತು. ನಾನು ಋತುಮತಿಯಾಗುವ ಪೂರ್ವದಲ್ಲಿಯೇ ಮಾನಸಿಕ ಆಘಾತಕ್ಕೊಳಗಾಗಲು ಋತುಮತಿಯಾಗುವ ಪೂರ್ವದಲ್ಲಿಯೇ ಮಾನಸಿಕ ಆಘಾತಕ್ಕೊಳಗಾಗಲು ಉಪಕ್ರಮಿಸಿದ್ದೆ, ಹನ್ನೊಂದನೇ ವಯಸ್ಸಿಗೆ ಒತ್ತಾಯಿಸಲಾಯಿತು. ಅವಳಿಗಿಂತ ಸಾಕಷ್ಟು ದೊಡ್ಡವರನ್ನೊಳಗೊಂಡು ಅವಳು ದೊಡ್ಡವಳಾಗುವ ಮೊದಲೇ ಹೆಣ್ಣು ಮಗುವಿಗೆ ಜನ್ಮವಿತ್ತಳು ನಾನು ಪ್ರೀತಿಸಿದವನಿಂದಲೇ ಈ ಮಗುವನ್ನು ಪಡೆದೆನಾದರೂ ಅವನು ನನ್ನನ್ನು ಮದುವೆಯಾಗಲಿಲ್ಲ.

ಆಂಧ್ರಪ್ರದೇಶ ಮಹಿಳಾ ಸಾಮಖ್ಯ ಸಂಸ್ಥೆಯು ಮೆಹಬೂಬನಗರದಲ್ಲಿ ಸ್ವ-ಸಹಾಯ ಗುಂಪುಗಳ ಹಾಗೂ ಸಂಘಗಳನ್ನು ತೆರೆಯುವ ತಮ್ಮ ಕಾರ್ಯಕ್ರಮಗಳನ್ನು ಪ್ರಾರಂಭಿಸಿದಾಗ, ಅವರು ಕರಣಿ ಗ್ರಾಮದಲ್ಲಿ ಒಂದು ಸಂಘವನ್ನು ಸ್ಥಾಪಿಸಿದರು. ಆಶಮ್ಮ ಅದರಲ್ಲಿ ಆಸಕ್ತಿಯಿಂದ ಸೇರಿಕೊಂಡಳು. 1997 ರಲ್ಲಿ ಅವಳು ಆ ಸಂಘದ ಮುಖ್ಯಸ್ಥಳಾದಾಗ, ಜೋಗಿನಿ ಪದ್ಧತಿಯನ್ನು ನಿಲ್ಲಿಸುವ ನಿರ್ಣಯ ಕೈಗೊಂಡಳು. ಪೋಲೀಸರಾಗಲಿ ಗ್ರಾಮದ ಪ್ರಮುಖರಾಗಲಿ ಪ್ರಾರಂಭದಲ್ಲಿ ಅವಳಿಗೆ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಒಂದು ಸಂದರ್ಭದಲ್ಲಿ 9 ವರ್ಷದ ಹುಡಿಗೆಯೊಬ್ಬಳನ್ನು ಅರ್ಪಿಸುವದನ್ನು ಪ್ರತಿಭಟಿಸಿ ಧರಣಿಕೂತಳು ಮತ್ತು ಅದರಲ್ಲಿ ಅವಳು ಯಶಸ್ವಿ ಆಗುವವರೆಗೆ ಧರಣಿ ನಿಲ್ಲಿಸಲಿಲ್ಲ. ಆದರೆ ಆಕೆ ಜೋಗಿನಿಯಾಗಿ ತನ್ನ ಧಾರ್ಮಿಕ ಹಕ್ಕುಗಳಿಗಾಗಿಯೂ ಸಹ ಹೋರಾಡಿದಳು. ಯಾವಾಗ ಅವಳ ತಂದೆ ತೀರಿಕೊಂಡಾಗ, ಅವನ ಚಿತೆಗೆ ಬೆಂಕಿಯನ್ನು ತಗಲಿಸುವ ಕೆಲಸಕ್ಕೆ ಅವಳಿಗೆ ಒತ್ತಾಯಿಸಲಾಯಿತು. ಕಾರಣ ಅವನಿಗೆ ಮಗನಿಲ್ಲುದಿರುವದರಿಂದ.

ಇತ್ತೀಚಿನ ವರುಷಗಳಲ್ಲಿ ಅವಳು APMSS ಮಹಿಳಾ ಚಳುವಳಿಯಲ್ಲಿ ದಣಿವರಿಯದೇ ಕೆಲಸ ಮಾಡಿ ಊರೂರಿಗೆ

ಸಹಭಾವನೆಯುಳ್ಳ ಜೋಗಿನಿಯರೊಂದಿಗೆ ಅಲೆದು ಮಹಿಳೆಯರು ಸಂಘಟನೆಯಾಗಿ ಅರ್ಪಣೆಗಳನ್ನು ನಿಲುಗಡೆ ಮಾಡಲು ಸಹಾಯ ಮಾಡಿದಳು. 'ಜೋಗಿನಿಯಾಗಿ ನಾನು ಬಹಳಷ್ಟು ಕಷ್ಟಗಳನ್ನು ಎದುರಿಸಿದ್ದೇನೆ, ಆದ್ದರಿಂದ ಯಾವ ಹೆಣ್ಣು ಮಗುವನ್ನು ಜೋಗಿನಿಯಾಗಿ ಮಾಡಬಾರದು. 2001 ರಲ್ಲಿ ಅವಳು ರಾಷ್ಟ್ರೀಯ ಬಹುಮಾನವನ್ನು ಸ್ವೀಕರಿಸಿದಳು, ಅವಳ ಪ್ರಚಾರ ಕೆಲಸಕ್ಕಾಗಿ ನಿರೇಜ ಭಾನೋ ಪ್ರಶಸ್ತಿ ಬಹುಮಾನದ ಮೊತ್ತ ರೂ. 150,000/- ರೂ. 50,000/- ಗಳನ್ನು ಅವಳ ಮಗಳ ಹೆಸರಿನ ಮೇಲೆ ಟ್ರಸ್ಟಿನಲ್ಲಿ ಇಟ್ಟು ಉಳಿದ ರೂ. 100,000/- ಹಣವನ್ನು ಸಂಘಕ್ಕೆ ಬಿಟ್ಟು ಕೊಟ್ಟಳು ಯಾಕೆಂದರೆ ಕಾರ್ಯವು ಸಾಂಘಿಕವೆಂದು ಅವಳು ಭಾವಿಸುತ್ತಾಳೆ. ಇಂದು ಅವಳು ಕೂಲಿಯವಳಾಗಿಯೇ ಇದ್ದು ದಿನಕ್ಕೆ 20 ರೂ. ಕೂಲಿ ಪಡೆಯುತ್ತಿದ್ದಾಳೆ.'

ಆಶಮ್ಮ ಬೇಕಾದಷ್ಟು ಕಷ್ಟಗಳನ್ನು ಅನುಭವಿಸಿದ್ದರೂ ಅವಳು ಯಾವುದೇ ಪುರುಷನನ್ನು ಅಥವಾ ಮದುವೆಯನ್ನು ದೂರುವುದಿಲ್ಲ, 'ಮದುವೆ ಅಗತ್ಯವಿದೆ. ಅದು ಸಮಾಜದಲ್ಲಿ ನಿಮಗೆ ಗೌರವವನ್ನು ನೀಡುತ್ತದೆ' ಅವಳು ತನಗಾಗಿ ಈ ಗೌರವವನ್ನು ಬಯಸುವದಿಲ್ಲ, ನಾನು ನನ್ನ ಎಲ್ಲ ಬಯಕೆಗಳನ್ನು ಬಿಟ್ಟುಕೊಟ್ಟಿದ್ದೇನೆ. ಅವಳು ಹೇಳುತ್ತಾಳೆ. - ಆದರೆ ನನ್ನ ಮಗಳು ಅನಿತಾ ಓದಬೇಕು ಮತ್ತು ಒಬ್ಬ ಒಳ್ಳೆಯ ವ್ಯಕ್ತಿಯನ್ನು ಮದುವೆ ಆಗಬೇಕೆಂದು ಆಶಿಸುತ್ತೇನೆ. ಅಷ್ಟರಲ್ಲಿ, ಅವಳು ತನ್ನ ಕೆಲಸ ಮುಂದುವರಿಸುತ್ತಾಳೆ. ಕೃಷಿಯ ಹೊರಗೆಲಸಗಳಲ್ಲಿ ಮತ್ತು ಸಂಘದಲ್ಲಿ ನಾನು ನಿಷ್ಠುರವಾಗಿ ಮತ್ತು ಶಾಂತಿಯುತವಾಗಿ ಜೋಗಿನಿಯರ ಸಮಸ್ಯೆಗಳನ್ನು ಪರಿಹರಿಸಲು ಹೋರಾಡುತ್ತೇನೆ.

<u>ಭಾರತಿ ಮತ್ತು ಜ್ಯೋತಿ :</u>

ಭಾರತಿ ಮತ್ತು ಜ್ಯೋತಿ ಇಬ್ಬರು 10 ವರ್ಷದವರು ಇಬ್ಬರ ತಾಯಂದಿರು ಜೋಗಿನಿಯರು ಭಾರತೀಯ ತಾಯಿ ಪದ್ಮಾ ದೇವತೆಗೆ ಮದುವೆ ಆದದ್ದು. ಅತಿ ಸಣ್ಣ ವಯಸ್ಸಿನಲ್ಲಿ ಋತುಮತಿಯಾದ ಕೂಡಲೇ ಅವಳ ಸಮೀಪ ಸಂಬಂಧಿಯೊಬ್ಬರಿಗೆ ಎರಡನೇ ಹೆಂಡತಿಯಾಗಿ ಕೊಟ್ಟರು ಅವಳು 4 ಮಕ್ಕಳನ್ನು ಹೆತ್ತಳು, ಮೂವರು ಹೆಣ್ಣು - ಅವುಗಳಲ್ಲಿ ಭಾರತಿಯೇ ಚಿಕ್ಕವಳು, ಮತ್ತು ಒಬ್ಬ ಗಂಡು ಪದ್ಮಾ ನಿಯಮಿತವಾಗಿ ಮುಂಬಯಿಗೆ ಭೂಪುಸರ್ ಸಾಗುವಳಿ ಕೂಲಿಯಾಗಿ, ಇಬ್ಬರು ಹೆಣ್ಣು ಮತ್ತು ಗಂಡು ಮಗುವನ್ನು ಜೊತೆಗೆ ಕರೆದುಕೊಂಡು ವಲಸೆ ಹೋಗುತ್ತಿದ್ದಳು ಭಾರತಿಗೆ ಓದಬೇಕಿತ್ತು, ಅದಕ್ಕಾಗಿ ಪದ್ಮಾ APMSS ನಡೆಸುತ್ತಿದ್ದ ಶಾಲೆಗೆ ಬ್ರಿಡ್ಜ್ ಕೋರ್ಸಿಗೆ (ವಸತಿ ಸಹಿತ) ದಾಖಲು ಮಾಡಿದಳು. ಪದ್ಮಾ ತನ್ನ ಜೋಗಿನಿ ಸ್ಥಾನವನ್ನು ತುಚ್ಛ ಮಾಡುತ್ತಿದ್ದಳು, ಮತ್ತು ತನ್ನ ಮಕ್ಕಳನ್ನು ಅರ್ಪಣೆ ಮಾಡಬಾರದೆಂದಿದ್ದಳು. ಭಾರತಿಗೆ ಆಚರಣೆಯ ಬಗ್ಗೆ ಗುರುತಾಗಿತ್ತು, ಆದುದರಿಂದ ಅದನ್ನು ತಪ್ಪಿಸಲು ಬಹಳೇ ಉತ್ಸುಕಳಾಗಿದ್ದಳು, ಅವಳಿಗೆ APMSS ನಲ್ಲಿ ಸಮಾಜ ಕಾರ್ಯಕರ್ತೆಯಾಗಿ ಕೆಲಸ ಮಾಡುವ ಆಶೆ ಹಾಗೂ ಮುಂಬರುವ ದಿನಗಳಲ್ಲಿ ಜೋಗಿನಿ ಆಗುವವರನ್ನು ಆಗಗೊಡದಿರುವದಾಗಿತ್ತು.

ಜ್ಯೋತಿಯ ತಾಯಿ ಲಿಂಗಮ್ಮ ಜೋಗಿನಿಯಾಗಿ ಭಯಂಕರವಾಹಿ ಕಷ್ಟ ಅನುಭವಿಸಿದ್ದಳು ಹಾಗೂ ಕ್ರೂರ ಹಾಗೂ ದೌರ್ಜನ್ಯಕಾರಿ ಕುಡಕ ಗಂಡ ನೊಂದಿಗಿದ್ದಳು. ಅವಳು ತನ್ನ ಯಾವ ಮಕ್ಕಳನ್ನೂ ಶಾಲೆಗೆ ಕಳಿಸಲಾಗಲಿಲ್ಲ, ಅದರಿಂದ ಜ್ಯೋತಿಯ ಇಬ್ಬರೂ ಸಹೋದರರು ತಮ್ಮ ಸ್ವಂತ ಗ್ರಾಮದಲ್ಲಿಯೇ ರೈತರ ದನಗಳನ್ನು ಕಾಯಲು ಹೋಗುತ್ತಿದ್ದರು. ಇದರಿಂದ ಅವರಿಗೆ ಕುಟುಂಬಕ್ಕೆ ಸಾಲವಷ್ಟು ಮಾತ್ರ ಅನ್ನ ದೊರೆಯುತ್ತಿತ್ತು, ಅವರು APMSS ಸಂಸ್ಥೆಯ ಸಂಪರ್ಕಕ್ಕೆ ಬಂದರೋ ಜ್ಯೋತಿಗೆ ಬ್ರಿಡ್ಜ್ ಕೋರ್ಸ್ ಸೇರಿಕೊಳ್ಳಲು ಕೇಳಿಕೊಂಡರು ಈಗ ಅವಳು ಚೆನ್ನಾಗಿ ಮಾಡುತ್ತಿದ್ದು 5ನೇ ತರಗತಿಗೆ ತಲುಪಿದ್ದಾಳೆ.

ಆಂಟಿ - ಸ್ಲೇವರಿ ಇಂಟರನ್ಯಾಶನಲ್ ಮತ್ತು ಶ್ರವಂತಿ ಸಂಸ್ಥೆಯವರ ಕಾರ್ಯಾಗಾರದಲ್ಲಿ ಭಾರತಿ ಮತ್ತು ಜ್ಯೋತಿ ಇಬ್ಬರೂ ನಾಟಕದಲ್ಲಿ ಭಾಗವಹಿಸಿದ್ದರು ಈ ನಾಟಕದಲ್ಲಿ ಈ ತಂಡುವು ಜೋಗಿನಿ ಅರ್ಪಣೆ ಮತ್ತು ನಂತರದ ಜೀವನದಲ್ಲಿನ ದುಃಖದ ದಿನಗಳನ್ನು ಬಿಂಬಿಸಿತ್ತು.

<u>ದೇವದಾಸಿ ಮಹಿಳೆಯರ ವ್ಯಕ್ತಿ ಚಿತ್ರಣ - ಬೆಳಗಾವಿ</u>

<u>ಮಹಾದೇವಿ</u>

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಮಹಾದೇವಿಯನ್ನು ಅವಳು ಎಂಟು ವರುಷದವಳಿದ್ದಾಗಲೇ ದೇವದಾಸಿಯಾಗಿ ಅರ್ಪಣೆ ಮಾಡಲಾಗಿತ್ತು, ಅವಳ ತಾಯಿ-ತಂದೆಯವರು ತುಂಬ ಬಡವರಾಗಿದ್ದು ಅವರಿಗೆ ಮೂವರು ಹೆಣ್ಣು ಮಕ್ಕಳಿದ್ದರು, ಗಂಡು ಮಕ್ಕಳಿರಲಿಲ್ಲ, ಆದ್ದರಿಂದ ಮಹಾದೇವಿಯನ್ನು ಅರ್ಪಿಸಲು ನಿರ್ಧರಿಸಿದರು, ಅದರಿಂದ ಅವಳು ಕುಟುಂಬಕ್ಕಾಗಿ ಆದಾಯವನ್ನು ತರಬಹುದೆಂದು ಅವಳನ್ನು ಶಾಲೆಗೆ ಹಾಕಲಿಲ್ಲ, ಅವಳು ಸಂಪೂರ್ಣವಾಗಿ ನಿರಕ್ಷರಿ ಮತ್ತು ಅವಳಿಗೆ ಏನೂ ತಿಳಿಯುತ್ತಿರಲಿಲ್ಲ, ಈ ಸಮಯದಲ್ಲಿ ಮತ್ತು ಇನ್ನೂ ಕೆಲವು ವರ್ಷಗಳಿಗೆ ಸಭೆಯಲ್ಲಿ ತರಕಾರಿ ಮಾರಿ ಕುಟಂಬಕ್ಕೆ ಸಹಾಯ ಮಾಡಿದಳು.

13ನೇ ವಯಸ್ಸಿಗೆ ಸಂಗಾತಿಯೊಬ್ಬ ನನ್ನ ಜೀವನದಲ್ಲಿ ಪ್ರವೇಶಿಸಿದ. ಅವನು ಒಳ್ಳೆಯವನಿದ್ದ, ಅವಿವಾಹಿತ, ಅವನು

ಜೈನ ಧರ್ಮಿಯನಾಗಿದ್ದ. ಅವನು ಭೂ ಒಡೆಯನಾಗಿದ್ದು 6 ಎಕರೆ ಜಮೀನು ಹೊಂದಿದ್ದ, ಅವರು ಸಂಗಾತಿಗಳಾಗಿದ್ದು ಮೂವರು ಮಕ್ಕಳನ್ನು ಪಡೆದರು, ಅವಳು ದೇವದಾಸಿಯಾಗಿದ್ದುದರಿಂದ ಅವರು ಮದುವೆಯಾಗಲಿಲ್ಲ. ಅವನ ಕುಟುಂಬದವರು, ಪರಂತು ತಮ್ಮ ಮಗ ಸಮೀಪದ ಗ್ರಾಮದ ಒಂದು ಹುಡಿಗೆಯನ್ನು ಮದುವೆ ಮಾಡಿಕೊಳ್ಳಬೇಕೆಂದು ಬಯಸಿದ್ದರು ಮತ್ತು ಅವರು ಅವನನ್ನು ಬಿಟ್ಟು ಬಿಡಲು ಅವಳ ಮೇಲೆ ಒತ್ತಾಯ ಹೇರಿದರು. ಇನ್ನೊಬ್ಬಳನ್ನು ಮದುವೆ ಆಗುವದನ್ನು ಇಬ್ಬರೂ ಒಪ್ಪಿಕೊಳ್ಳುವಂತೆ ಒತ್ತಾಯ ಪಡಿಸಿದರು. ಆತನ ಮನಸ್ಸಿಲ್ಲದಿದ್ದರೂ, ಯಾಕಂದರೆ ಅವನು ಮಹಾದೇವಿಯನ್ನು ತುಂಬ ಪ್ರೀತಿಸುತ್ತಿದ್ದ. ಅವನು ಅವಳ ಮತ್ತು ಮಕ್ಕಳ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ತೆಗೆದುಕೊಂಡಿದ್ದ ಮತ್ತು ಅವಳು ತರಕಾರಿ ಮಾರುವುದಾಗಲೀ ಯಾವುದೇ ಕೆಲಸ ಮಾಡುವದಾಗಲಿ ಅವಶ್ಯವಿದಿಲ್ಲ.

ಮದುವೆಯಾದ ಸನಿಹದಲ್ಲಿ ಆತ ಅತಿಯಾಗಿ ಕುಡಿಯಲಾರಂಭಿಸಿದ ಅವನ ಹೆಂಡತಿಯ ಕುಟುಂಬದವರು ಅವನ ಆಸ್ತಿಯನ್ನು ತಮ್ಮ ಹೆಸರಿಗೆ ಬರುವಂತೆ ಅವನಿಂದ ಸಹಿ ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು ಇದರಿಂದ ಅವನ ಸಹಾಯವು ಅವಳಿಗೆ ನಿಂತಿತು. ಆತನ ತಾಯಿ ಮತ್ತು ಸಹೋದರಿಯರು ಮಹಾದೇವಿಯ ಜೊತೆ ಒಳ್ಳೆಯ ಸಂಬಂಧವನ್ನು ಕಾಯ್ದುಕೊಂಡಿದ್ದರು ಮತ್ತು ಅವಳಿಗೆ ಆಹಾರ ಹಾಗೂ ಇನ್ನಿತರ ವಸ್ತುಗಳಿಗಾಗಿ ಸಹಾಯ ಮಾಡಿದರು. ಆದರೆ ಆತನ ತಾಯಿಯ ಮರಣಾನಂತರ ಇದೂ ನಿಂತು ಹೋಯಿತು. ಅಷ್ಟರಲ್ಲಿ ಅವಳ ಸಂಗಾತಿ ಇನ್ನೂ ಹೆಚ್ಚಿಗೆ ಕುಡಿದು ಕುಡಿದು ಕೊನೆಗೆ ಆತನೂ ತೀರಿಹೋದ.

1992 ರಲ್ಲಿ ಮಹಾದೇವಿಯು ಸರಕಾರೇತರ ಸಂಸ್ಥೆಯಾದ ಮೈರಾಡಾದ ಸಂಪರ್ಕಕ್ಕೆ ಬಂದು ಸ್ವ-ಸಹಾಯ ಸಂಘದ ಸದಸ್ಯಳಾದಳು. ಹಂತದಲ್ಲಿ ಅವಳು ದೇವದಾಸಿ ಪದ್ಧತಿಯ ಕಳಂಕಗಳ ಬಗ್ಗೆ ಗುರುತಿಸಿ ಕೊಳ್ಳುತ್ತಿದ್ದಳು, ಮತ್ತು ಅದನ್ನು ನಿರಾಕರಿಸುವಷ್ಟರ ಮಟ್ಟಿಗೆ ಪ್ರೇರಿತಳಾಗಿದ್ದಳು. ಸ್ವ-ಸಾಹಯ ಗುಂಪಿನೊಂದಿಗೆ ಅವಳ ತೊಡಗುವಿಕೆಯಿಂದ ಅವಳಿಗೆ ಪಡಿತರ ಚೀಟಿ ಹಾಗೂ ವಸತಿ ಗೃಹದ ಸಹಾಯಧನ ದೊರಕುವಂತಾಗಿತ್ತು. ಇಂದಿನ ಸಮಸ್ಯೆ ಎಂದರೆ 15 ವರ್ಷಗಳ ಹಿಂದೆ ಸಿಕ್ಕಂತ ವಸತಿಗೃಹಗಳು ಇಂದು ತೀವ್ರ ದುರಸ್ತಿಗೆ ಬಂದಿದ್ದು, ಅವರ ಅತ್ಯಂತ ಕಡಿಮೆ ಕೂಲಿಯಿಂದ ದೊರೆಯುವ ಆದಾಯದಲ್ಲಿ ಬಹು ಹೆಚ್ಚಿನ ಖರ್ಚಿನ ಕಟ್ಟಡ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳುವದು ತುಂಬಾ ಕಷ್ಟದಾಯಕವಾಗಿದೆ ಹಾಗೂ ತನ್ನ ಮಕ್ಕಳನ್ನು ಶಾಲೆಗೆ ಕಳಿಸುವದಕ್ಕೂ ಗಳಿಕೆ ಸಾಲದಾಗುತ್ತಿಲ್ಲ.

ತನ್ನ ಸಂಗಾತಿಯ ಸಾವಿನ ನಂತರ ಅವಳು ಗ್ರಾಮಪಂಚಾಯತ ಚುನಾವಣೆಗೆ ನಿಂತು ಸ್ಥಾನವನ್ನು ಗೆದ್ದುಕೊಂಡಳು. ಆದರೆ ಇದ್ದಾವುದೂ ಅವಳ ಪರಿಸ್ಥಿತಿಯಲ್ಲಿ ನಾಟಕೀಯ ಬದಲಾವಣೆಯನ್ನು ತರಲು ಸಹಾಯವಾಗಲಿಲ್ಲ. ಅವಳಲ್ಲಿ ಸ್ವಚ್ಛತೆ ಮತ್ತು ಸಶಕ್ತತೆ ಇದ್ದರೂ, ಮಹಾದೇವಿಯ ಜೀವನವು ಕಷ್ಟಕರವಾಗಿಯೇ ಇದೆ. ಏಕೆಂದರೆ ಅವಳಿಗೆ ವಯಸ್ಸಾಗುತ್ತ ಬರುತ್ತಿದ್ದು ಆರೋಗ್ಯ ಅಷ್ಟು ಸರಿಯಾಗಿಲ್ಲ. ಅವಳಿಗೆ ಸಮಾಜದಲ್ಲಿನ ಗೌರವ ಕಡಿಮೆಯಾಗುತ್ತಿದೆ ಎಂದು ಎನಿಸುತ್ತಿದ್ದರೂ ಅವಳು ತನ್ನ ಸಂಬಂಧಿಕರೊಂದಿಗೆ ಒಳ್ಳೆಯ ಸಂಬಂಧವನ್ನಿರಿಸಿಕೊಂಡು ಬಂದಿರುವದರಿಂದ ಅವರ ಆಶೀರ್ವಾದ ಅವಳ ಬೆನ್ನಿಗಿರುವದರಿಂದ ಅವರ ಗೌರವ ಅವಳಿಗಿದೆ. ಈಗ ಅವಳು ತರಬೇತಿ, ಸ್ವಯಂ ಉದ್ಯೋಗಕ್ಕಾಗಿ ಸಾಲಗಳನ್ನು ಎದುರು ನೋಡುತ್ತಿದ್ದು ತನ್ನ ಭವಿಷ್ಯವನ್ನು ಸುಧಾರಿಸಿಕೊಳ್ಳಲು ಮತ್ತೆ ಅವಳು ತರಕಾರಿ ಮಾರಾಟಕ್ಕೆ ಇಳಿಯಬಯಸಿದ್ದಾಳೆ.

## ಕಮಲವ್ವ

ಕಮಲವ್ವ ಸಹ ಬೆಳಗಾವಿ ಜಿಲ್ಹೆಯ ರಾಯಬಾಗ ತಾಲೂಕಿನವಳು, ಅವಳು ಎಂಟು ವರುಷದವಳಿದ್ದಾಗಲೇ ದೇವದಾಸಿ ಆದವಳು ಆ ಸಮಯದಲ್ಲಿ ಅವಳ ಕಿರಿಯ ಸಹೋದರ ತೀವ್ರ ಕಾಯಿಲೆಯಿಂದ ಬಳಲುತ್ತಿದ್ದ. ಗ್ರಾಮದ ಹಿರಿಯರು ಕಮಲವ್ವನ ತಾಯಿ - ತಂದೆಯರಿಗೆ ಉಪದೇಶ ಮಾಡಿದ್ದೇನೆಂದರೆ ಗಂಡು ಮಗು ಈ ಕಾಯಿಲೆಯಿಂದ ಪಾರಾಗಿ ಆರೋಗ್ಯನಂತನಾಗಬೇಕಾದರೆ ಹಿರಿಯ ಮಗಳು ಕಮಲವ್ವನನ್ನು ಎಲ್ಲಮ್ಮದೇವಿಗೆ ಅರ್ಪಣೆ ಮಾಡಿ ದೇವದಾಸಿ ಮಾಡಿದರೆ ದೇವಿಯ ಆಶೀರ್ವಾದವಾಗಿ ಮಗನಿಗೆ ಒಳ್ಳೆಯದಾಗುವದೆಂದು ಬಗ್ಗೆ ಬಲವಾದ ನಂಬಿಕೆ ಇತ್ತು, ಆದರೆ ಆ ಮಗು ಬದುಕುಳಿಯಲಿಲ್ಲ.

14 ವರುಷದ ವರೆಗೆ ಕಮಲವ್ವ ಕೂಲಿಗಳ ಶಿಬಿರದಲ್ಲಿ ಕೂಲಿಯಾಗಿ ಕೆಲಸ ಮಾಡಿದಳು. ಈ ವಯಸ್ಸಿನಲ್ಲಿ ಇಬ್ಬರು ಪುರುಷರು ಅವಳೊಡನೆ ದುರ್ವರ್ತನೆಗಿಳಿದರು. ಏನಾಯಿತೆಂದು ಅವಳು ವಿವರಿಸುತ್ತಾಳೆ. ಅಂದಿನಿಂದ ಅವಳ ಜೀವನದಲ್ಲಿ ಬದಲಾವಣೆಯಾಯಿತು. ಅವಳನ್ನು ಸಾಂಗಲಿಗೆ ಕರೆದೊಯ್ದು ಒಂದು ದೊಡ್ಡ ನಗರ, ಅಲ್ಲಿ ಅವಳು ವ್ಯಾಪಾರಿ ಲೈಂಗಿಕ ಕಾರ್ಯಕರ್ತೆಯಾದಳು, ದಿನಂಪ್ರತಿ ನಾಲ್ಕೈದು ಗ್ರಾಹಕರಿಗೆ ಅವಳು ಒದಗಬೇಕಾಗುತ್ತಿತ್ತು, ಮೂರು ವರ್ಷಗಳ ನಂತರ ಅವಳ ಸ್ವಗ್ರಾಮ ಹಾರೂಗೇರಿಗೆ (ಬೆಳಗಾವಿ ಜಿಲ್ಹೆಯ) ಮರಳಿದಳು. ಆ ಸಮಯಕ್ಕೆ ಅವಳ ಜೀವನದಲ್ಲಿ ಸಂಗಾತಿಯಾಗಿ ಶ್ರೀಕಾಂತನೆಂಬ ಹೆಸರಿನ ಪುರುಷನು ಪ್ರವೇಶ ಮಾಡಿದನು. ಅವಳಿಗೆ 20 ವರ್ಷವಾಗುವ ವರೆಗೆ ಇಬ್ಬರೂ ಜತೆಯಾಗಿದ್ದರು. ಅವರಿಗೆ ಇಬ್ಬರು ಮಕ್ಕಳಾದರು.

ಮದುವೆಯಾಗಿ ನಾಲ್ಕು ಮಕ್ಕಳಿದ್ದ ಶ್ರೀಕಾಂತ ಜೈನ ಧರ್ಮಿಯನು. ಅವನು ಒಳ್ಳೆಯ ಸ್ಥಿತಿವಂತೆ, ಅವನಿಗೆ ಎಂಟು ಎಕರೆ ಜಮೀನಿತ್ತು. ಆತನು ವಿವಾಹಿತ ಪತ್ನಿಯ ಜೊತೆ ಇರಲು ಹೋದಾನಾದರೂ ಮೇಲಿಂದ ಮೇಲೆ ಕಮಲವ್ವನಿಗೆ ಭೆಟ್ಟಿ ಮಾಡುತ್ತಿದ್ದ ಪ್ರತಿ ಸಲ ಭೆಟ್ಟಿ ಆದಾಗ ರೂ. 50/- ಅಥವಾ ರೂ. 100/- ಅವಳಿಗೆ ನೀಡುತ್ತಿದ್ದ. ಜೀವನವು ಈ ಹೊಂದಾಣಿಕೆಯ ಮೇಲೆ ಸಾಗುತ್ತಿತ್ತು. ಎರಡು ವರುಷಗಳ ನಂತರ ಒಂದು ದಿನ ಶ್ರೀಕಾಂತನು ಅಪಘಾತದಲ್ಲಿ ಸಾವಿಗೀಡಾದನು. ಇದರ ನಂತರ ಪರಿಸ್ಥಿತಿ ಬಿಗಡಾಯಿಸಿತು. ವಿಶೇಷವಾಗಿ ಹಿರಿಯವಳಾದ ಅವಳ ತಾಯಿ ಕಾಯಿಲೆಯಿಂದ ಬಳಲುತ್ತಿದ್ದರಿಂದ ಹಾಗೂ ಅವಳು ಇವಳ ಮೇಲೆಯೇ ಅವಲಂಬಿತಳಾಗಿದ್ದರಿಂದ ಶ್ರೀಕಾಂತನೊಡನೆ ಇವಳು ಮದುವೆ ಆಗದೆ ಹೋಗಿದ್ದರು ಸಹ ಅವಳ ಬದುಕಾಗಿ ಸ್ವಲ್ಪ ವ್ಯವಸ್ಥೆಯನನು ಮಾಡಿದ್ದ. ಆತನು ತೀರಿಕೊಂಡ ಬಳಿಕ, ಇವಳಿಗೆ ಯಾವ ಆಶ್ರಯವೂ ಉಳಿಯದೇ ಅಥವಾ ಕೌಟುಂಬಿಕ ವಾರಸುದಾರಿಕೆ ದೊರೆಯದೇ ಅವಳು ಕೂಲಿ - ನಾಲಿ ಮಾಡಿಯೇ ಬದುಕುಳಿಯಬೇಕಾಗಿ ಬಂದಿತು. ಆದರೆ ಕಮಲವ್ವ ಅಂದಿನಿಂದ ಬೇರಾವ ಹೊಸ ಸಂಗಾತಿಯನ್ನು  ಸ್ವೀಕರಿಸಲಿಲ್ಲ.

1993 ರಲ್ಲಿ ಅವಳು ಮಹಾರಾಷ್ಟ್ರದಿಂದ ಹಿಂತಿರುಗಿ ಬಂದ ಮೇಲೆ ಅವಳ ಹಿಂದೆಯೇ ದೇವದಾಸಿತ್ವವನ್ನು ಲೈಂಗಿಕ ವೃತ್ತಿಯನ್ನು ತನ್ನ ಹಿಂದೆಯೇ ಬಿಟ್ಟು ಬಂದಿದ್ದು ಕಮಲವ್ವನಿಗೆ ಬಹಳೇ ಸಂತಸವಾಗಿತ್ತು. ಅವಳ ಉಳಿತಾಯದ ಹಣಕ್ಕೆ ಮತ್ತು ಶ್ರೀಕಾಂತನಿಗೆ ಅವಳು ಕೃತಜ್ಞಳಾಗಿದ್ದಳು. ಇದೇ ಸಂದರ್ಭದಲ್ಲಿ ಪ್ರಥಮ ಬಾರಿಗೆ ಸರಕಾರೇತರ ಸಂಸ್ಥೆಯಾದ ಮೈರಾಡ ಇದೇ ಸಂದರ್ಭದಲ್ಲಿ ಪ್ರಥಮ ಬಾರಿಗೆ ಸರಕಾರೇತರ ಸಂಸ್ಥೆಯಾದ ಮೈರಾಡ ಸಂಸ್ಥೆಯ ಸಂಪರ್ಕ ಬಂದು ಅವಳು ಸ್ವ-ಸಹಾಯ ಗುಂಪಿಗೆ ಸೇರಿಕೊಂಡಳು ಇಲ್ಲಿಯವರೆಗೆ ಅವಳಿಗೆ ಸಾಕಷ್ಟು ವಿಷಯಗಳನ್ನು ಅರಿತಿದ್ದಳು, ಜೊತೆಗೆ ಎಚ್.ಆಯ್.ವ್ಹಿ.ಯ ಅಪಾಯವನ್ನೊಳಗೊಂಡು. ಸರಕಾರೇತರ ಸಂಸ್ಥೆಗಳು ಬಹಳಷ್ಟು ವಿಷಯಗಳನ್ನು ತಿಳಿದುಕೊಳ್ಳುವಂತೆ ಮಾಡಿದರು ಮತ್ತು ಅವರು ನಮಗೆ ಸಹಾಯವನ್ನು ಮಾಡಿದರು. ಇಡೀ ಸಮಾಜದಲ್ಲಿ ನಮಗೆ ಅಷ್ಟು ಗೌರವಿಲ್ಲದಿದ್ದರೂ, ಕೊನೆಯ ಪಕ್ಷ ನಮ್ಮ ಸಮುದಾಯದಲ್ಲಿಯಾದರೂ ನಮಗೆ ಗೌರವವಿದೆ.

ಕಮಲವ್ವಳ ಮಗ ಈಗ 18 ವರುಷದವನು ಮತ್ತು ಕೃಷಿ ಕೂಲಿಕಾರನಾಗಿ ಕೆಲಸ ಮಾಡುತ್ತಾನೆ. ಈಗ ಅವನು ಬೆಳೆದು ನಿಂತಿರುವದರಿಂದ, ಅವನ ಕೂಲಿ ಎಂದರೆ ಅವರಿಗೆ ಆರ್ಥಿಕ ತೊಂದರೆಗಳಿಲ್ಲ. ಅವಳ ಮಗಳು ಮದುವೆಯಾಗಿದ್ದಾಳೆ, ಅವಳಿಗೆ ಒಂದು ಸ್ವಂತ ಹೆಣ್ಣು ಮಗುವಿದೆ. ಕಮಲವ್ವನಿಗೆ ಪಡಿತರ ಚೀಟಿ ಹಾಗೂ ವಸತಿ ಗೃಹಕ್ಕೆ ಕೆಲವು ವರ್ಷಗಳ ಮೊದಲೇ ಸಹಾಯ ದೊರೆತಿದೆ. ಬೇರೆಯವರಂತೆ ಈಗ ಅವಳು ತರಬೇತಿಯನ್ನು ಪಡೆದುಕೊಳ್ಳಬಯಸಿದ್ದು ಅದರಿಂದ ಸಾಲ ಪಡೆದು ಚಿಕ್ಕ ವ್ಯಾಪಾರವನ್ನು ಪ್ರಾರಂಭಿಸಿಬೇಕೆಂದು ನಿರೀಕ್ಷಿಸುತ್ತಿದ್ದಾಳೆ - ಈ ವ್ಯಾಪಾರೀ ಚಟುವಟಿಕೆಯಲ್ಲಿ ಅವಳ ಬದುಕಿನ ಭದ್ರತೆಯ ಕನಸನ್ನು ಕಾಣುತ್ತಿದ್ದಾಳೆ.